ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

# ಗ್ರಾಮೋದಯ

ತ್ರೈಮಾಸಿಕ ಪತ್ರಿಕೆ

| ಸಂಪುಟ-1 | ಸಂಚಿಕೆ-1 | ಜನೇವರಿ 2021 - ಮಾರ್ಚ್ 2021 | ಪುಟಗಳು-32 |
| --- | --- | --- | --- |
| Vol-1 | Issue-1 | January 2021 - March - 2021 | Pages-32 |



ರೈತರ ಆದಾಯವನ್ನು ದ್ವಿಗುಣಗೊಳಿಸುವುದರ ಕುರಿತು ಸಂವಾಧಾತ್ಮಕ ಅಧಿವೇಶನ




ವಿಶ್ವವಿದ್ಯಾಲಯದ ಸಬರಮತಿ ಆಶ್ರಮದ ವತಿಯಿಂದ
ವಿದ್ಯಾರ್ಥಿಗಳಿಗೆ ಚರಕದಿಂದ ನೂಲು ತೆಗೆಯುವ ವಿಷಯ ಕುರಿತು ತರಬೇತಿ



ಸಬರಮತಿ ಆಶ್ರಮದ ಪ್ರತಿಬಿಂಬ ವಿಶ್ವವಿದ್ಯಾಲಯದ ಆವರಣದಲ್ಲಿ




ವಿಶ್ವವಿದ್ಯಾಲಯದಲ್ಲಿ ಮಹಾತ್ಮ ಗಾಂಧೀಜಿಯವರ ಪ್ರೇರಣಾ ಕೇಂದ್ರ

## ಈ ಸಂಚಿಕೆಯೊಳಗೆ
## ಜನವರಿ 2021 – ಮಾರ್ಚ್ 2021 ವರೆಗೆ.....


| | | | |
|---|---|---|---|
| ಕುಲಪತಿಗಳ ನುಡಿ | – | ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ | – 5 |
| ಕುಲಸಚಿವರ ಆಶಯ | – | ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ | – 6 |
| ಹಣಕಾಸು ಅಧಿಕಾರಿಗಳ ಮನದಾಳದ ಮಾತು | – | ಶ್ರೀ. ಪ್ರಶಾಂತ್ ಜೆ. ಸಿ. | – 7 |
| ವಿಶೇಷ ಲೇಖನ | – | ಪ್ರೊ. ಜಿ. ಬಿ. ಶಿವರಾಜು<br>ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ | – 8 |
| ಸಾಧಕರ ಸಂದರ್ಶನ<br>ಸಂದರ್ಶಕರು<br>ಪ್ರಶಾಂತ ಹೆಚ್. ಮೇರವಾಡೆ ಮತ್ತು<br>ಶಶಿಕಲಾ ಬಿ. ಹಳ್ಳಿಕೇರಿ | – | ಆಶುಕವಿಯ ಸಂದರ್ಶನ<br>ಸಾಹಿತಿ ಶ್ರೀಯುತ ರಾಮಣ್ಣ ಬ್ಯಾಟಿ | – 11 |
| ವಿಶೇಷ ಸಮಾವೇಶ | – | ವಿಶ್ವವಿದ್ಯಾಲಯದಲ್ಲಿ ರೈತರ ಆದಾಯ ದ್ವಿಗುಣ ಸಂವಾದ<br>"ಆತ್ಮನಿರ್ಭರ ಯೋಜನೆ ರೈತರ ಆದಾಯ ವೃದ್ಧಿಗೆ ಸಹಕಾರಿ"<br>ಡಾ. ಅಶೋಕ ದಳವಾಯಿ | – 13 |
| ವಿದ್ಯಾರ್ಥಿಯ ಸಾಧನೆ | – | ಹಾಲೇಶ್ ಕಟಗಿ | – 14 |
| | | **ವಿಶೇಷ ವರದಿ, ವಿಶೇಷ ಕಾರ್ಯಗಾರ ಹಾಗೂ ವಿಶೇಷ ಕಾರ್ಯಕ್ರಮಗಳು** | |
| ಪ್ರಕಾಶ ಎಸ್. ಮಾಚೇನಹಳ್ಳಿ | – | ಖಾದಿ ಸ್ವಾವಲಂಬನೆಯ ಸಂಕೇತ<br>(ಸಬರಮತಿ ಆಶ್ರಮದಲ್ಲಿ ನೂಲು ತಯಾರಿಕೆಗೆ ಚಾಲನೆ,<br>ವಿ.ವಿ., ಆವರಣದಲ್ಲಿ ಖಾದಿ ಕಲರವ) | – 15 |
| ಗುರುದತ್ತ ರಾಯ್ಕರ | – | ಪಂಚಾಯತ್ ರಾಜ್ ಬಲವರ್ಧನೆಯಲ್ಲಿ<br>ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ"<br>ಎರಡು ದಿನದ ಕಾರ್ಯಾಗಾರ | – 17 |
| ಡಿ. ಎಚ್. ಅಬ್ದುಲ್ ಗನಿ | – | ವಿಶ್ವ ಜಲ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ<br>ಉದ್ಘಾಟನಾ ಕಾರ್ಯಕ್ರಮ | – 20 |
| ವಿಶ್ವವಿದ್ಯಾಲಯದ ಚಟುವಟಿಕೆಗಳು | – | ಮುಂಬರುವ ವಿಶ್ವವಿದ್ಯಾಲಯದ ಕಾರ್ಯಕ್ರಮ | – 22 |


**ಸೂಚನೆ :**
ಲೇಖನಗಳನ್ನು ಪ್ರಕಟಣೆಗಾಗಿ ಆಯ್ಕೆ ಮಾಡುವ ಹಾಗೂ ಪ್ರಕಟಿಸುವ ಸೂಕ್ತ ಸಮಯದ ನಿರ್ಧಾರ ಸಂಪಾದಕರಿಗೆ ಸೇರಿರುತ್ತದೆ.
ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸಂಪಾದಕ ಮಂಡಳಿಯ ಅಭಿಪ್ರಾಯವಲ್ಲ.
ಈ ಆವೃತ್ತಿಯು ಮಾರಟಕ್ಕಲ್ಲ ಮೊ : (08372) 297214, ಇಮೇಲ್ : ctpsksrdpru@gmail.com

**ಸಂಪಾದಕೀಯ ಮಂಡಳಿ**

ಅಧ್ಯಕ್ಷರು :
**ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ,**
ಕುಲಸಚಿವರು
ಪ್ರಧಾನ ಸಂಪಾದಕರು :
**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಸಹಾಯಕ ನಿರ್ದೇಶಕರು,
ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ
ಸಹ ಸಂಪಾದಕರು :
**ಡಾ. ಗೀತಾ ಎನ್. ಬಂಗಾರಿ**
ಎಂ.ಎಸ್.ಡಬ್ಲ್ಯು, ಕಾರ್ಯಕ್ರಮ ಸಂಯೋಜಕರು
ಸದಸ್ಯರುಗಳು :
**ಶ್ರೀ ಆನಂದಗೌಡ ಪಿ. ಫಕೀರಗೌಡ**
ಸಹಾಯಕ ಗ್ರಂಥಪಾಲಕರು
**ಶ್ರೀ ಪ್ರಶಾಂತ ಹೆಚ್. ಮೇರವಾಡೆ**
ಪ್ರಾಧ್ಯಾಪಕರು ಮತ್ತು ಮಾಧ್ಯಮ ಸಂಯೋಜಕರು
**ಶ್ರೀ ಗುರುದತ್ತ ರಾಯ್ಕರ**
ಪ್ರಾಜೆಕ್ಟ್ ಫೆಲೋ ಎಂ.ಕಾಂ. ವಿಭಾಗ
ಸದಸ್ಯ ಕಾರ್ಯದರ್ಶಿಗಳು :
**ಶ್ರೀಮತಿ ಶಶಿಕಲಾ ಬಿ. ಹಳ್ಳಿಕೇರಿ**
**ಕು. ರಾಧಿಕಾ ಕೆ. ಆರ್.**
ಸಲಹಾ ಮಂಡಳಿ :
**ಶ್ರೀ ಗಿರೀಶ್ ದೀಕ್ಷಿತ್**
ಸಹಾಯಕ ನಿರ್ದೇಶಕರು,
ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ
**ಶ್ರೀ ಎಂ. ಬಿ. ಚನ್ನಪ್ಪಗೌಡರ**
ಎಂ.ಬಿ.ಎ., ಕಾರ್ಯಕ್ರಮ ಸಂಯೋಜಕರು
**ಡಾ. ಅಭಯಕುಮಾರ ಗಸ್ತಿ**
ಎಂ.ಕಾಂ., ಕಾರ್ಯಕ್ರಮ ಸಂಯೋಜಕರು
**ಡಾ. ಶ್ರೀಧರ ಹಾದಿಮನಿ**
ಎಂ.ಎ. ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್,
ಕಾರ್ಯಕ್ರಮ ಸಂಯೋಜಕರು
**ಕು. ಫಕೀರಮ್ಮ ಪಿ. ಮುರಗೋಡ**
ಎಂ.ಎಸ್ಸಿ. ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ,
ಕಾರ್ಯಕ್ರಮ ಸಂಯೋಜಕರು
**ಶ್ರೀ ರಾಘವೇಂದ್ರ ಇಟ್ಟಂಗಿ**
ಎಂ.ಎಸ್ಸಿ. ಗಣಕ ವಿಜ್ಞಾನ, ಕಾರ್ಯಕ್ರಮ ಸಂಯೋಜಕರು
**ಶ್ರೀ ಸುರೇಶ ಲಮಾಣಿ**
ಎಂ.ಎಸ್ಸಿ. ಜಿಯೋಇನ್ಫಾರ್‌ಮೆಟಿಕ್ಸ್, ಕಾರ್ಯಕ್ರಮ
ಸಂಯೋಜಕರು
**ಡಾ. ನಾಗವೇಣಿ ಎಸ್. ಜೆ.**
ಎಂ.ಪಿ.ಹೆಚ್., ಕಾರ್ಯಕ್ರಮ ಸಂಯೋಜಕರು
**ಡಾ. ಸಂಗನಗೌಡ ಪಾಟೀಲ**
ಎಂ.ಎ. ಅರ್ಥಶಾಸ್ತ್ರ, ಕಾರ್ಯಕ್ರಮ ಸಂಯೋಜಕರು
**ಶ್ರೀ ಪ್ರವೀಣ ಅಂಕಲಕೋಟಿ**
ಎಂ.ಎ. ಸಾರ್ವಜನಿಕ ಆಡಳಿತ,
ಕಾರ್ಯಕ್ರಮ ಸಂಯೋಜಕರು
**ಡಾ. ವೀರೇಶ್‌ಕುಮಾರ್ ವಿಜಾಪೂರ**
ಸಹಾಯಕ ನಿರ್ದೇಶಕರು, ದೈಹಿಕ ಶಿಕ್ಷಣ

# ಸಂಪಾದಕೀಯ...



ಭಾರತವು ತನ್ನ ಗ್ರಾಮಗಳಲ್ಲೆ ಜೀವಿಸುತ್ತದೆ, ಎಂದು ದೃಢವಾಗಿ ನಂಬಿದ್ದ ಹಾಗೂ ಗ್ರಾಮಗಳ ಅಭಿವೃದ್ಧಿಯಲ್ಲೇ ಭಾರತದ ಅಭಿವೃದ್ಧಿ ಅಡಗಿದೆ ಎಂದು ನಿಶ್ಚಲವಾಗಿ ಘೋಷಿಸಿದ ಮಹಾತ್ಮ ಗಾಂಧೀಜಿಯವರ ಪರಿಕಲ್ಪನೆಯಂತೆ "ವಿಶ್ವವಿದ್ಯಾಲಯದ ನಡಿಗೆ, ಗ್ರಾಮೀಣ ಜನರೆಡೆಗೆ" ಎಂಬ ಧ್ಯೇಯದೊಂದಿಗೆ 'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆ ಹೊರಹೊಮ್ಮಿದೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಿಂದ ಪ್ರಾರಂಭಿಸುತ್ತಿರುವ ತ್ರೈಮಾಸಿಕ ಪತ್ರಿಕೆಯು ಪ್ರಥಮ ಆವೃತ್ತಿಯಾಗಿರುತ್ತದೆ. ಈ ತ್ರೈಮಾಸಿಕ ಪತ್ರಿಕೆಗೆ 'ಗ್ರಾಮೋದಯ' ಎಂಬ ಶಿರೋನಾಮೆ ನೀಡಲು ಪ್ರೋತ್ಸಾಹಿಸಿದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ ಅವರಿಗೆ ಚಿರಋಣಿಯಾಗಿದ್ದೇನೆ.

ಈ ತ್ರೈಮಾಸಿಕ ಪತ್ರಿಕೆಯಲ್ಲಿ ರೈತರ ಆದಾಯ ದ್ವಿಗುಣಗೊಳಿಸುವ ವಿಚಾರಸಂಕಿರಣ ಪ್ರಮುಖವಾಗಿದ್ದು, ಈ ದಿಶೆಯಲ್ಲಿ ವಿಶ್ವವಿದ್ಯಾಲಯ ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಂಡಿರುವ ವಿಷಯವನ್ನು ಪ್ರಚುರಪಡಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ, ಅದರ ಬಗ್ಗೆ ಸಂಪೂರ್ಣ ಅಧ್ಯಯನ ಹಾಗೂ ಚಿಂತನೆ ಹೊಂದಿರುವ ಮುತ್ಸದ್ದಿಗಳ ಲೇಖನ, ಪ್ರಚುರ ರಹಿತ ಸಾಧನೆಗೊಂಡ (Unsung Heroes) ಸಾಧಕರ ಸಂದರ್ಶನ, ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಮುಖ್ಯ ಚಟುವಟಿಕೆಗಳು ಹಾಗೂ ವಿದ್ಯಾರ್ಥಿಗಳ/ ಪ್ರಾಧ್ಯಾಪಕರ ವಿಶೇಷ ಸಾಧನೆಗಳನ್ನು ಈ ಸಂಪುಟದಲ್ಲಿ ಬಿಂಬಿಸಲಾಗಿದೆ.

ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದಿಂದ, ಈ ತ್ರೈಮಾಸಿಕ ಪತ್ರಿಕೆ ಪ್ರಾರಂಭಿಸಲು ಸಂಪೂರ್ಣ ಸಹಕಾರ ನೀಡಿದ ಸಂಪಾದಕೀಯ ಮಂಡಳಿ ಅಧ್ಯಕ್ಷರು, ಸದಸ್ಯರಿಗೆ, ಸಲಹಾ ಮಂಡಳಿಗೆ ಅಭಿನಂದನೆ ಹಾಗೂ ಅಭಿವಂದನೆ ಸಲ್ಲಿಸುತ್ತೇನೆ.

ವಿಶ್ವವಿದ್ಯಾಲಯದ ಈ ತ್ರೈಮಾಸಿಕವು ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಪ್ರಥಮ ಹೆಜ್ಜೆಯಾಗಿದ್ದು ಓದುಗ ಸಹೃದಯಿಗಳು ಪತ್ರಿಕೆಯನ್ನು ಓದಿ, ಮುಂಬರುವ ತ್ರೈಮಾಸಿಕ ಪತ್ರಿಕೆಗಳನ್ನು ಉನ್ನತಮಟ್ಟಕ್ಕೆ ಕೊಂಡೊಯ್ಯಲು ಸಲಹೆ ಸೂಚನೆಗಳನ್ನು ತಿಳಿಸಿದಲ್ಲಿ ಅದನ್ನು ನಮ್ರವಾಗಿ ಸ್ವೀಕರಿಸಿ ಮುಂದಿನ ಸಂಪುಟದಲ್ಲಿ ಪರಿಷ್ಕರಿಸಿ ಪ್ರಕಟಿಸಲಾಗುವುದು.

**ಡಾ. ಅಬ್ದುಲ್ ಅಜೀಜ್ ಮುಲ್ಲಾ**
ಸಂಪಾದಕರು

## ಕುಲಪತಿಗಳ ನುಡಿ



**ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ**
ಕುಲಪತಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

# ಉದಯವಾಗಲಿ ನಮ್ಮ ಚಲುವ ಕನ್ನಡನಾಡು

ಕನ್ನಡ ನಾಡು ಉದಯವಾಗಬೇಕೆಂದರೆ ಪ್ರತಿಯೊಂದು ಗ್ರಾಮ ಅಭಿವೃದ್ಧಿಯಾಗಬೇಕು. ಪ್ರತಿಯೊಂದು ಗ್ರಾಮ ಅಭಿವೃದ್ಧಿಯಾಗಬೇಕೆಂದರೆ ಗ್ರಾಮವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಯಾಗಬೇಕು. ಗ್ರಾಮೀಣಾಭಿವೃದ್ಧಿ ಯಶಸ್ಸಿಗಾಗಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದಲ್ಲಿ ಸ್ಥಾಪಿಸಲಾಯಿತು.

ಈ ವಿಶ್ವವಿದ್ಯಾಲಯದಲ್ಲಿ ಶೈಕ್ಷಣಿಕಾತ್ಮಕವಾಗಿ ಹಾಗೂ ಸಂಶೋಧನಾತ್ಮಕವಾಗಿ ತರಬೇತಿ ಮತ್ತು ವಿಸ್ತರಣಾ ಚಟುವಟಿಕೆಗಳ ಮುಖಾಂತರ ಗ್ರಾಮೀಣಾಭಿವೃದ್ಧಿಗೆ ಪೂರಕವಾದ ಮಾನವ ಸಂಪನ್ಮೂಲಗಳನ್ನು ಬೆಳೆಸುವಂತಹ ಪ್ರಯತ್ನ ಮಾಡಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿ ಮಹಾತ್ಮ ಗಾಂಧೀಜಿಯವರ ತತ್ವಗಳನ್ನು ಮತ್ತು ವಿಚಾರಗಳನ್ನು ಬೆಳೆಸಲು ವಿವಿಧ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಅದರಂತೆ, ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯೂ ಕೂಡ ಒಂದು. ಈ ತ್ರೈಮಾಸಿಕ ಪತ್ರಿಕೆಯಲ್ಲಿ ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರಸಂಕಿರಣಗಳು, ಕಾರ್ಯಗಾರಗಳು ಹಾಗೂ ಪ್ರಮುಖ ಚಟುವಟಿಕೆಗಳನ್ನು ಬಿಂಬಿಸಲಾಗಿದೆ. ಅದಕ್ಕಾಗಿ ಸಂಶೋಧನೆ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ಸಂಪಾದಕೀಯ ಮಂಡಳಿಗೆ ನನ್ನ ಅಂತರಾಳದ ಅಭಿನಂದನೆಗಳು.

**ಗ್ರಾಮೋದಯ ಭವಃ**

# ಕುಲಸಚಿವರ ಆಶಯ



**ಪ್ರೊ. ಬಸವರಾಜ ಎಲ್. ಲಕ್ಕಣ್ಣವರ**
ಕುಲಸಚಿವರು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ಭಾರತವು ಒಂದು ಭಿನ್ನತೆಯಲ್ಲಿ ಏಕತೆಯಿಂದ ಕೂಡಿದ ದೇಶವಾಗಿದೆ. ಈ ಒಂದು ದೇಶವು ಹೆಚ್ಚು ಗ್ರಾಮಗಳನ್ನೊಳಗೊಂಡಿದೆ. ಅಂತಹ ಗ್ರಾಮಗಳ ಅಭಿವೃದ್ಧಿ ನಮ್ಮ ಉದ್ದೇಶವಾಗಿದೆ. ಆ ಗ್ರಾಮಗಳ ಅಭಿವೃದ್ಧಿಗಾಗಿ ಮಹಾತ್ಮ ಗಾಂಧೀಜಿಯವರ ಕನಸಾಗಿರುವ 'ಗ್ರಾಮೀಣ ಬೇರು ಜಾಗತಿಕ ಮೇರು' ಎಂಬ ಧ್ಯೇಯ ವಾಕ್ಯದೊಂದಿಗೆ ಆರಂಭವಾದ ನಮ್ಮ ಹೆಮ್ಮೆಯ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಗಾಂಧೀಜಿಯವರ ತತ್ವ, ಚಿಂತನೆ ಮತ್ತು ಆದರ್ಶಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುತ್ತಿದೆ. ಅಂತಹ ಒಂದು ಚಟುವಟಿಕೆಗಳಲ್ಲಿ ಒಂದಾದ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರವು ಪ್ರಕಟಿಸುತ್ತಿರುವ 'ಗ್ರಾಮೋದಯ' ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿರುವುದು ಅತ್ಯಂತ ಸಂತಸದ ವಿಷಯವಾಗಿದೆ. ಈ ಸಂದರ್ಭದಲ್ಲಿ ನಮಗೆಲ್ಲರಿಗೂ ಪ್ರೇರಣೆಯಾದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರಿಗೆ ಧನ್ಯವಾದಗಳು ಹಾಗೂ ಪ್ರಧಾನ ಸಂಪಾದಕರು, ಸಹ ಸಂಪಾದಕರು, ಸದಸ್ಯರುಗಳು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.


# ಹಣಕಾಸು ಅಧಿಕಾರಿಗಳ ಮನದಾಳದ ಮಾತು



**ಶ್ರೀ ಪ್ರಶಾಂತ ಜೆ. ಸಿ.**
ವಿತ್ತಾಧಿಕಾರಿಗಳು,
ಕ.ರಾ.ಗ್ರಾ. ಮತ್ತು ಪಂ.ರಾ.
ವಿಶ್ವವಿದ್ಯಾಲಯ, ಗದಗ

ಭಾರತದ ಆತ್ಮವು ತನ್ನ ಗ್ರಾಮಗಳಲ್ಲಿ ನೆಲೆಸಿದೆ ಹಾಗೂ ಭಾರತದ ಭವಿಷ್ಯವು ತನ್ನ ಗ್ರಾಮಗಳಲ್ಲಿ ಅಡಗಿದೆ ಎಂದು ನಂಬಿ ಗ್ರಾಮಗಳ ಅಭಿವೃದ್ಧಿಗಾಗಿ ಅಹರ್ನಿಶೆ ಶ್ರಮಿಸಿದ ಮಹಾತ್ಮ ಗಾಂಧೀಜಿಯವರು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸ್ಥಾಪನೆಗೆ ಸ್ಫೂರ್ತಿಯಾಗಿದ್ದಾರೆ. ಅವರ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಈಗಾಗಲೆ ವಿಶ್ವವಿದ್ಯಾಲಯವು ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ ರವರ ಮಾರ್ಗದರ್ಶನದಲ್ಲಿ ಅನೇಕ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳನ್ನು ಕೈಗೊಂಡಿದೆ. ಈಗ ವಿಶ್ವವಿದ್ಯಾಲಯವು ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯನ್ನು ಹೊರತರುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಸಂದರ್ಭದಲ್ಲಿ ನಮಗೆಲ್ಲರಿಗೂ ಪ್ರೇರಣೆಯಾದ ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರಿಗೆ ಧನ್ಯವಾದಗಳನ್ನು ತಿಳಿಸಬಯಸುತ್ತೇನೆ ಹಾಗೂ ಸಂಪಾದಕೀಯ ಮಂಡಳಿಯ ಅಧ್ಯಕ್ಷರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ, ಕುಲಸಚಿವರು, ಇವರಿಗೆ ಹಾಗೂ ಪ್ರಧಾನ ಸಂಪಾದಕರು, ಸಹ ಸಂಪಾದಕರು, ಸದಸ್ಯರುಗಳು, ಸದಸ್ಯ ಕಾರ್ಯದರ್ಶಿಗಳು ಹಾಗೂ ಸಲಹಾ ಮಂಡಳಿ ಸದಸ್ಯರುಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

**ವಿಶೇಷ ಲೇಖನ**



**ಪ್ರೊ. ಜಿ. ಬಿ. ಶಿವರಾಜು**

**ಪ್ರೊ. ಜಿ. ಬಿ. ಶಿವರಾಜು,**
**ಲೇಖಕರು ಇವರು ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಉಪಾಧ್ಯಕ್ಷರಾಗಿದ್ದು, ಮಹಾತ್ಮ ಗಾಂಧೀಜಿಯವರ ಜೀವನದ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಗಾಂಧೀ ತತ್ವಗಳನ್ನು ಅನುಸರಿಸಿಕೊಂಡು ಬಂದಿರುತ್ತಾರೆ. ಇವರು ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರಾಗಿ ಸಹ ಕಾರ್ಯನಿರ್ವಹಿಸುತ್ತಿದ್ದಾರೆ.**

# ಗಾಂಧಿ ವ್ಯಕ್ತಿ ವಿಚಾರಗಳ ಪ್ರಸ್ತುತತೆ

“ಗಾಂಧೀಜಿ ಅವರಂತಹ ಮಹಾನ್ ವ್ಯಕ್ತಿಯನ್ನು ಪಡೆದ ಭಾರತೀಯರು ಪುಣ್ಯವಂತರು”
–ಜೆ.ಸಿ.ಸ್ಮಟ್ಸ್ (ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜಿ ಅವರನ್ನು ಜೈಲಿನಲ್ಲಿಟ್ಟಿದ್ದ ಬ್ರಿಟಿಷ್ ಅಧಿಕಾರಿ)

“ಗಾಂಧೀಜಿ ಜಗತ್ತಿಗೆ ಅನಿವಾರ್ಯ, ಮರೆತರೆ ವಿಶ್ವದ ನಾಶ”–ಮಾರ್ಟಿನ್ ಲೂಥರ್ ಕಿಂಗ್

“ಗಾಂಧೀಜಿ ಕುಳಿತಲ್ಲಿ ದೇವ ಮಂದಿರವಾಯಿತು, ನಡೆದಲ್ಲಿ ಪವಿತ್ರ ಭೂಮಿಯಾಯಿತು”
– ಜವಹರಲಾಲ್ ನೆಹರು



ವಿಶ್ವದ ಗಣ್ಯರು ಹೇಳಿದ ಮೇಲಿನ ಮಾತುಗಳು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ವ್ಯಕ್ತಿತ್ವದ ಹಿರಿಮೆ ಗರಿಮೆಯನ್ನು ಸಾರುತ್ತವೆ. ಇಂದಿನ ಯುವ ಪೀಳಿಗೆಯು ಆಧುನಿಕ ಯುಗದಲಿ ದ್ವಂದ್ವದಲ್ಲಿದ್ದಾರೆ, ಹತಾಶರಾಗಿದ್ದಾರೆ. ಅಸಹಿಷ್ಣುತೆಯ ಕಾರ್ಮೋಡ ಅವರನ್ನು ಸುತ್ತುವರಿದಿದೆ. ವಾಸ್ತವವಾಗಿ ಜೀವನದ ಉದ್ದೇಶದ ಬಗ್ಗೆ ಯುವಜನರಲ್ಲಿ ಅರಿವು ಮೂಡಿಸುವುದರಲ್ಲಿ ನಾವು ಬಹುಪಾಲು ವಿಫಲರಾಗಿದ್ದೇವೆ ಅನಿಸುತ್ತಿದೆ. ಸಮಾಜದ ಪ್ರತಿಯೊಬ್ಬರಲ್ಲಿಯೂ ಒಬ್ಬ ಬುದ್ಧ, ಬಸವೇಶ್ವರ, ವಿವೇಕಾನಂದ, ಗಾಂಧಿ, ಡಾ. ಬಿ.ಆರ್.ಅಂಬೇಡ್ಕರ್ ಮೊದಲಾದ ದಾರ್ಶನಿಕರು ಇದ್ದೇ ಇರುತ್ತಾರೆ. ಈ ಮಹಾಮಹಿಮರೆಲ್ಲಾ ಮನುಕುಲ ಇರುವವರೆಗೂ ಇಡೀ ವಿಶ್ವ ಸ್ಮರಿಸುವಂತಹ ಆದರ್ಶದ ಬದುಕು ಬಿಟ್ಟು ಪ್ರಾತಃ ಸ್ಮರಣೀಯರಾಗಿದ್ದಾರೆ. ಆದರೆ ಅವರು ನಮ್ಮ ಬದುಕಿಗೆ ನೀಡಿರುವ ಜೀವನದ ಮೌಲ್ಯಗಳನ್ನು ಕಡೆಗಣಿಸಿ, ತಿರಸ್ಕರಿಸಿ ಆಧುನಿಕ ಆಕರ್ಷಣೆಗೆ ಯುವಕರು ಬಲಿಯಾಗುತ್ತಿರುವುದು ವಿಪರ್ಯಾಸದ ಸಂಗತಿ. ಯುವಜನತೆ ಈ ಮಹಾಮಹಿಮರನ್ನು

ಹೆಚ್ಚೆಚ್ಚು ಓದಿಕೊಳ್ಳಬೇಕು, ಆಗ ಮಾತ್ರ ಜೀವನಕ್ಕೆ ಬಹು ಅಮೂಲ್ಯವಾದ ಪಾಠಗಳು ಸಿಗುತ್ತವೆ.

ಯುವ ಜನತೆ ಹತಾಶೆಯಿಂದ ಹೊರಬರಲು, ಮೌಲ್ಯಯುತ ಜೀವನಕ್ಕೆ ಹಾಗೂ ಅವರ ಜೀವನದಲ್ಲಿ ಸಕಾರಾತ್ಮಕ ಭಾವನೆ ಮೂಡುವುದಕ್ಕೆ ಗಾಂಧೀಜಿ ವಿಚಾರ ನಮಗೆಲ್ಲ ಪರಿಹಾರ. ಗಾಂಧೀಜಿ ಜಗತ್ತಿನ ಒಂದು ಮಹೋನ್ನತ ಆದರ್ಶದ ಸಂಕೇತವಾಗಿದ್ದಾರೆ. ಯಂತ್ರಯುಗದ ಭರಾಟೆಯಲ್ಲಿ ನಾವು ನೆಮ್ಮದಿ ಮತ್ತು ಶಾಂತಿಯಿಂದಿರಲು ಗಾಂಧೀಜಿ ಅವರು ಬದುಕು ಮತ್ತು ಚಿಂತನೆಗಳು ಹಿಂದೆಂದಿಗಿಂತಲೂ ಇಂದು ಅತ್ಯಂತ ಪ್ರಸ್ತುತ ಹಾಗೂ ಅನಿವಾರ್ಯ. ಬಸವಳಿದು ಕ್ಷೀಣಿಸುತ್ತಿರುವ ಮಾನವನ ಮನಸ್ಸನ್ನು ಪುನಶ್ಚೇತನಗೊಳಿಸುವ ಮತ್ತು ಸನ್ಮಾರ್ಗದಲ್ಲಿ ಕೊಂಡೊಯ್ಯುವ ದಿಸೆಯಲ್ಲಿ ಅವರ ವ್ಯಕ್ತಿತ್ವ ಆಧುನಿಕ ಜಗತ್ತಿಗೆ ದಾರಿದೀಪ. ನಾಯಕತ್ವದ ಜೊತೆಗೆ ಪ್ರಾಮಾಣಿಕ ಬದುಕಿನ ಸುಖವನ್ನು ತೋರಿಸಿಕೊಟ್ಟು, ಸರಳ ಬದುಕನ್ನು ಜೀವನದ ಪಥವಾಗಿಸಿಕೊಂಡು, ಸಮಷ್ಟಿಯಲ್ಲಿ ತನ್ನ ಸಂತೋಷವನ್ನು ಕಂಡುಕೊಂಡು ಜೀವನದ ಸಾರ್ಥಕತೆಯನ್ನು ಮೆರೆದವರು ಮಹಾತ್ಮ ಗಾಂಧಿ. ನಾಲಗೆಯನ್ನು ನಂಬಿ ನಡೆದ ನಾಯಕ. ಆಡಿದ ಮಾತಿಗೂ ನಡೆದ ಬದುಕಿಗೂ ಅಂತರವಿಲ್ಲದೆ ಬದುಕಿದ ನೇತಾರ ಎಂದು ಗಣ್ಯರು ಸ್ಮರಿಸಿದ್ದಾರೆ.

ಗಾಂಧೀಜಿ ಅವರನ್ನು "ಶತಮಾನದ ಶ್ರೇಷ್ಠೋತ್ತಮ ಮಾನವ", "ಅಂತರ್ ರಾಷ್ಟ್ರೀಯ ಭಾವೈಕ್ಯತೆಯ ಸಂಕೇತ" ಎಂದೂ ಸಹ ಬಣ್ಣಿಸಲಾಗಿದೆ. ಶತ್ರುವಿನಲ್ಲಿ ಮಿತ್ರನನ್ನು ಕಾಣುವ, ದ್ವೇಷ, ಅಸೂಯೆ ಇರುವಲ್ಲಿ ಪ್ರೀತಿ ಹುಟ್ಟಿಸುವ, ಹಿಂಸೆಯನ್ನು ಅಹಿಂಸೆಯಿಂದ ಗೆಲ್ಲುವ, ಬಲಹೀನನನ್ನು ಬಲಿಷ್ಠಗೊಳಸುವ ಮತ್ತು ಜಾತಿವಾದ, ಕೋಮುವಾದದ ಸ್ಥಾನದಲ್ಲಿ ಭಾವೈಕ್ಯತೆ ತಂದವರು, ಸಂಸಾರಿಯಾಗಿಯೂ ಸಂತತನದಿಂದ ಬದುಕಿದವರು. ನಿರ್ಮಲ ಮನಸ್ಸು ಮತ್ತು ದೇಹವನ್ನು ಹೊಂದಿ ಜೀವನವನ್ನು ಅತ್ಯಂತ ಕಠಿಣ ಪರೀಕ್ಷೆಗಳಿಗೆ ಒಡ್ಡಿ ಕೊಂಡು ಜೀವನವನ್ನೇ ಸಂದೇಶವನ್ನಾಗಿ ಬದುಕಿ ಈ ಮನುಕುಲ ಸದಾ ಸ್ಮರಿಸುವಂತಹ ಹೆಗ್ಗುರುತು ಬಿಟ್ಟಿರುವ ವಿಶ್ವದ ಬಹು ಎತ್ತರದ ದಾರ್ಶನಿಕ ಮಹಾತ್ಮ ಗಾಂಧೀಜಿ ಎಂದು ಗಣ್ಯರು ಬಣ್ಣಿಸಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ತನ್ನ ವ್ಯಕ್ತಿತ್ವ ಮತ್ತು ಚಿಂತನೆಗಳಿಂದ ಜಗತ್ತನ್ನು ನಿರಂತರವಾಗಿ ಕಾಡಿದವರು ಮಹಾತ್ಮಗಾಂಧಿ. ಅಲ್ಲದೆ ಗಾಂಧೀಜಿ ಅವರ ಜೀವನ ಅಧ್ಯಯನ ಬಹು ಪುಣ್ಯಕರ, ಲಾಭದಾಯಕ. ಅವರ ಪ್ರಭಾವ ಅಪಾರ ಎಂದೂ ಸಹ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಸಂತರು ಹೇಳಿದಂತೆ ಗಾಂಧೀಜಿ ಮಾನವೀಯ ಮೌಲ್ಯಗಳ ಸಾರಸಂಗ್ರಹ ರೂಪ. ಗಾಂಧೀಜಿ ಪಯಣಿಸಿದ ದಾರಿಯನ್ನು ವೀಕ್ಷಿಸಿದರೆ ಗಾಂಧೀಜಿ ಎಂಬ ಮಾತು ಜನಜನಿತವಾಗಿರುವುದು ತಿಳಿಯುತ್ತದೆ. ಗಾಂಧೀಜಿ ಎಂಬುದು ಭಾರತಕ್ಕೆ ಒಂದು ಪವಿತ್ರ ಮಂತ್ರ. "ಗಾಂಧೀಜಿ ಅವರ ಚಿಂತನೆಯಲ್ಲಿ ಭಾರತ ಬದುಕಿದೆ" ಎಂದು ಸಹ ಬಣ್ಣಿಸಲಾಗಿದೆ. "ಗಾಂಧೀಜಿ ಭಾರತಕ್ಕೆ ಆತ್ಮವಾದರೆ ವಿಶ್ವಕ್ಕೆ ಮಹಾತ್ಮರಾಗಿದ್ದಾರೆ". ಮತ್ತೊಂದೆಡೆ ಈ ಗಾಂಧಿ ಪಂಡಿತನಾಗಿರಲಿಲ್ಲ. ಹಠಮಾರಿ ಮನುಷ್ಯನಾಗಿದ್ದ. ಕಸಗುಡಿಸುತ್ತಾ, ಜಗಳವಾಡುತ್ತಾ, ಉಪವಾಸ ಬೀಳುತ್ತಾ, ಆತ ತನ್ನೊಳಗಿದನ್ನು ಸ್ವಚ್ಛಗೊಳಿಸಲು ಪ್ರಯತ್ನಿಸಿದಷ್ಟೂ ಹೊರಗಿನವರಿಗೆ ಮಹಾತ್ಮನಾದ" ಎಂದು ಗಾಂಧಿ ಮಹಾತ್ಮನಾದ ಪರಿಯನ್ನು ತಿಳಿಸಿದ್ದಾರೆ. "ಸೃಜನಶೀಲವಾಗಿ ಬದುಕಿದ್ದ ಗಾಂಧಿ ಸೃಜನಶೀಲ ಸಾಹಿತ್ಯವನ್ನೇನು ಬರೆಯಲಿಲ್ಲ. ಆದರೆ ಆ ಕಾಲದ ಸೃಜನಶೀಲ ಸಾಹಿತ್ಯವನ್ನೆಲ್ಲಾ ಆತ ವ್ಯಾಪಿಸಿಬಿಟ್ಟ" ಎಂದು ಗಾಂಧೀಜಿ ಅವರ ಹಿರಿಮೆಯನ್ನು ಬಣ್ಣಿಸಿದ್ದಾರೆ.

ಮಹಾತ್ಮ ಗಾಂಧೀಜಿ ಕೇವಲ ಒಂದು ದೇಶಕ್ಕೆ, ಭಾಷೆಗೆ, ಒಂದು ಧರ್ಮಕ್ಕೆ ಅಥವಾ ಜಾತಿಗೆ ಸೀಮಿತವಾದ ವ್ಯಕ್ತಿಯಲ್ಲ. ಅವರಲ್ಲಿ ಜಗತ್ತಿನ ಎಲ್ಲ ದಾರ್ಶನಿಕರ, ಎಲ್ಲ ಧರ್ಮಗಳ ಮಾನವೀಯ ಮೌಲ್ಯಗಳು ಇರುವುದನ್ನು ಕಾಣಬಹುದು. ಇಂದಿನ ಪ್ರಕ್ಷುಬ್ದ ಪರಿಸ್ಥಿತಿಯಲ್ಲಿ ಒಬ್ಬರನ್ನು ಮತ್ತೊಬ್ಬರ ಮೇಲೆ ಎತ್ತಿಕಟ್ಟಿ, ನಮ್ಮಧರ್ಮ, ಜಾತಿಯೇ ಶ್ರೇಷ್ಠವಾದುದು, ಅನ್ಯರಜಾತಿ, ಧರ್ಮವು ಕನಿಷ್ಠ ಎಂಬ ನಿಷೇಧಾತ್ಮಕ ಭಾವನೆಯನ್ನು ಇಂದು ತೊಡೆದು ಹಾಕುವ ಅನಿವಾರ್ಯತೆ ಇದೆ. ಈ ಕಾರಣದಿಂದ ಗಣ್ಯರ ಮಾನವೀಯ ಮೌಲ್ಯಗಳನ್ನು ಯುವಜನರಲ್ಲಿ ಬಿತ್ತುವುದರ ಮೂಲಕ ಸ್ವಚ್ಛ, ನಂಬಿಕೆಯ, ಪ್ರೀತಿಯ, ನೆಮ್ಮದಿಯ ಸಮಾಜ ನಿರ್ಮಾಣವು ನಮ್ಮೆಲ್ಲರ ಜೀವನದ ಧ್ಯೇಯವಾಗಿಸಿಕೊಳ್ಳಬೇಕು. ನಾವು ಇವರೆಲ್ಲರ ಸ್ಮರಣೆ ಮಾಡಿದ ವರದಿಯು ಆ ಮಹಾನ್ ಸಾಧಕರಿಗೆ ತಲುಪುವುದಿಲ್ಲ. ಆದರೂ ಅವರ ಬದುಕು ಮತ್ತು ವಿಚಾರಗಳ ಸ್ಮರಣೆಯಿಂದ ಮುಂದಿನ ಪೀಳಿಗೆಯ ಬದುಕು ಕಟ್ಟಿ ಅವರಲ್ಲಿ ಆತ್ಮವಿಶ್ವಾಸವನ್ನುಂಟು ಮಾಡಲು ಸಾಧ್ಯವಿದೆ. ಸಾಧಕರ ವಿಚಾರಗಳಿಂದ ಯುವಜನರಲ್ಲಿ ಗಟ್ಟಿಯಾದ ವ್ಯಕ್ತಿತ್ವ ಹೊಂದುವಂತೆ ಮಾಡದೇ ಹೋದರೆ ನಷ್ಟ ಆಗುವುದು ಈ ಮಹಾನ್ ಚೇತನಗಳಿಗಲ್ಲ, ಉತ್ತಮ ಸಮಾಜದ ಭವಿಷ್ಯಕ್ಕೆ, ಸುಂದರ ಬದುಕಿನ ಕನಸು ಕಟ್ಟಿಕೊಂಡಿರುವ ಯುವ ಸಮುದಾಯಕ್ಕೆ. ಗಾಂಧೀಜಿ ಅವರೇ ಹೇಳಿದ "ಹಿರಿಯರನ್ನು ಜ್ಞಾಪಿಸುವುದು ಅವರ ಉದ್ಧಾರಕ್ಕಲ್ಲ. ಯುವ ಪೀಳಿಗೆಗೆ ಸೂಕ್ತ ಮಾರ್ಗದರ್ಶನಕ್ಕಾಗಿ ಅವರನ್ನು ನೆನೆಯದಿದ್ದರೆ ನಷ್ಟ ಅವರಿಗಾಗುವುದಿಲ್ಲ. ಅವರನ್ನು ನೆನೆಯದಿದ್ದರೆ ಯುವಜನಾಂಗಕ್ಕೆ ಅಪಾರ ನಷ್ಟವಾಗುತ್ತದೆ" ಎಂಬ ಮಾತು ಇಂದು ಹೆಚ್ಚು ಪ್ರಸ್ತುತ.

ಇಂದಿನ ಯುವಜನರಿಗೆ ಬೇಕಿರುವುದು ಕಟುಟೀಕೆ, ವಿಮರ್ಶೆ, ನಿಂದನೆಗಳಲ್ಲ. ಯಥಾರ್ಥ ಆದರ್ಶ ಹಾಗೂ ಯೋಗ್ಯ ಮಾರ್ಗದರ್ಶನ. ಅವರ ಉತ್ತಮ ಜೀವನಕ್ಕೆ ಬೇಕಾದುದು ಶಿಸ್ತು, ಸರಳತೆ, ಪ್ರಾಮಾಣಿಕತೆ, ಭ್ರಾತೃತ್ವ, ಮಾನವೀಯ ಮೌಲ್ಯಗಳು ಮತ್ತು ಸಂಸ್ಕಾರ. ಈ ಉತ್ತಮ ಗುಣಗಳು ಎಲ್ಲಿಂದಲೋ ದಿಢೀರನೆ ಬರುವುದಿಲ್ಲ. ಅವುಗಳನ್ನು ಮಾರುಕಟ್ಟೆಯಲ್ಲಿ ಕೊಂಡು ತರಲು ಆಗುವುದಿಲ್ಲ. ಬದುಕು

ಸಾರ್ಥಕವಾಗಬೇಕಾದರೆ ಜೀವನದ ಮೌಲ್ಯಗಳನ್ನು ಉತ್ತಮ ಶಿಕ್ಷಣ, ಪರಿಸರ, ಸಾಧಕರ, ದಾರ್ಶನಿಕರ ಮತ್ತು ಚಿಂತಕರ ವ್ಯಕ್ತಿ ವಿಚಾರಗಳನ್ನು ಅವರ ಮನಸ್ಸು ಮತ್ತು ಹೃದಯಕ್ಕೆ ಬಿತ್ತಿ ಪರಿಣಾಮ ಉಂಟುಮಾಡಿದರೆ ಮಾತ್ರ ಸಾಧ್ಯ. ಇದನ್ನೆಲ್ಲಾ ಗಮನಿಸಿ ವ್ಯಕ್ತಿ ಮತ್ತು ಸಮಷ್ಠಿಯ ಸ್ವಾಸ್ಥ್ಯಕ್ಕೆ ಈ ಅಂಶಗಳು ಅನಿವಾರ್ಯ ಹಾಗೂ ಅವಶ್ಯಕವಾದುದರಿಂದ ಗಾಂಧೀಜಿ ಅವರು ನುಡಿದಂತೆ ನಡೆದು ಬದುಕಿದ ವಿಚಾರಗಳನ್ನು ಎಲ್ಲರ ಮನಮನಗಳಿಗೆ, ಮನೆಗಳಿಗೆ ಪ್ರಸರಿಸಬೇಕು.

ವಿಶ್ವದಲ್ಲಿ ಗಾಂಧೀಜಿ ಅವರ ಬಗ್ಗೆ ಪ್ರಕಟವಾಗಿರುವ ಸಾಹಿತ್ಯ ಜಗತ್ತಿನ ಯಾರ ಬಗ್ಗೆಯೂ ಈ ಪ್ರಮಾಣದಲ್ಲಿ ಪ್ರಕಟವಾಗಿರಲಾರದು. ಗಾಂಧೀಜಿಯವರ ಬಗ್ಗೆ 500ಕ್ಕೂ ಹೆಚ್ಚು ಜೀವನ ಚರಿತ್ರೆಗಳು ಪ್ರಕಟಗೊಂಡಿವೆ. ಒಂದು ಅಧ್ಯಯನದ ಪ್ರಕಾರ ಜಗತ್ತಿನ ಬಹುಪಾಲು ಎಲ್ಲ ಭಾಷೆಗಳಲ್ಲಿ ಗಾಂಧೀ ಸಾಹಿತ್ಯ ಪ್ರಕಟವಾಗಿದ್ದು, ಆ ಶೀರ್ಷಿಕೆಗಳ ಒಟ್ಟು ಸಂಖ್ಯೆ ಸುಮಾರು 32 ಸಾವಿರ. 260ಕ್ಕೂ ಹೆಚ್ಚು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಗಾಂಧಿ ಶಾಂತಿ ಸಂಶೋಧನಾ ಕೇಂದ್ರಗಳು ಸ್ಥಾಪಿತವಾಗಿವೆ. 300ಕ್ಕೂ ಹೆಚ್ಚು ಸ್ಟಾಂಪ್‌ಗಳು ಪ್ರಕಟವಾಗಿವೆ. ಇವುಗಳು ಅವರ ವ್ಯಕ್ತಿ ವಿಚಾರಗಳ ಜನಪ್ರಿಯತೆಯನ್ನು ತಿಳಿಸುತ್ತವೆ. ಅಲ್ಲದೆ 2014ರಲ್ಲಿ ಪ್ರಕಟವಾಗಿರುವ ಚೀನಾ ದೇಶದ ಮಾಹಿತಿ ಪತ್ರಿಕೆ ಪ್ರಕಾರ ಚೈನಾದಲ್ಲಿ ಪೂರ್ವ ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾನಿಲಯದ ಮಟ್ಟದವರೆಗೆ ಗಾಂಧಿ ವಿಚಾರಗಳನ್ನು ಪಠ್ಯಕ್ರಮದಲ್ಲಿ ಸೇರಿಸಲಾಗಿದೆ. ಗಾಂಧಿ ವಿಚಾರಗಳು ಹೆಚ್ಚು ಪ್ರಸ್ತುತ ಎಂಬುದಕ್ಕೆ ಮತ್ತೊಂದು ನಿದರ್ಶನವೆಂದರೆ 1981 ಜೂನ್ 24ರಂದು ಜಗತ್ತಿನ 53 ಜನ ನೊಬೆಲ್ ಪ್ರಶಸ್ತಿ ವಿಜೇತರು ಪ್ರಸ್ತುತ ಜಾರಿಯಲ್ಲಿರುವ ವಿಶ್ವದ ರಾಜಕೀಯ, ಆರ್ಥಿಕ ವಿಚಾರಗಳಿಂದ ಬಹುದೊಡ್ಡ ಅಪಾಯವಿದೆ. ಅದಕ್ಕೆ ಇರುವುದೊಂದೇ ಮಾರ್ಗವೆಂದರೆ ಗಾಂಧೀಜಿಯವರ ರಾಜಕೀಯ, ಆರ್ಥಿಕ ವಿಚಾರಗಳನ್ನು ಅನುಷ್ಠಾನ ಗೊಳಿಸುವುದಾಗಿದ್ದು, ಅದಕ್ಕಾಗಿ ಮನವಿ ಮಾಡಿರುವುದು ಇಲ್ಲಿ ಉಲ್ಲೇಖಾರ್ಹ ಸಂಗತಿಯಾಗಿದೆ.

ಗಾಂಧೀಜಿಯವರ ಸರ್ವೋದಯತತ್ವವು ಆಧ್ಯಾತ್ಮಿಕ ತಳಹದಿಯ ಮೇಲೆ ರೂಪಿತವಾಗಿದೆ. ಗಾಂಧೀಜಿ ಅವರ ವ್ಯಕ್ತಿ ವಿಚಾರಗಳಲ್ಲಿ ಆಧ್ಯಾತ್ಮಿಕ ತಳಹದಿಯ ಮೂಲಸತ್ವವನ್ನು ಕಾಣಬಹುದು. 1994ರ ಡಿಸೆಂಬರ್ 4ರಂದು ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ "ಗಾಂಧಿ, ಮಾರ್ಕ್ಸ್ ಮತ್ತು ಮಾರ್ಕೆಟ್" ಎಂಬ ಒಂದು ಲೇಖನದ ಪ್ರಕಾರ ವಿಶ್ವಸಂಸ್ಥೆಯ ಹಣಕಾಸು ಸಮಿತಿ ತಾನು ಆರ್ಥಿಕ ನೆರವು ನೀಡಿದ ರಾಷ್ಟ್ರಗಳಿಗೆ ತಪಾಸಣೆಗೆ ತೆರಳಿತು. ಅಲ್ಲಿ ವಿಶ್ವಸಂಸ್ಥೆಯ ಆರ್ಥಿಕ ನೆರವಿನ ದುರುಪಯೋಗವಾದ ಬಗ್ಗೆ ತಿಳಿದು "ಈ ಪರಿಸ್ಥಿತಿ ಮುಂದುವರೆದರೆ ವಿಶ್ವದ ಯಾವ ಪ್ರಮಾಣದ ಭಂಡಾರವು ಸಹ ಜಗತ್ತಿನ ಸಮಸ್ಯೆಯನ್ನು ಬಗೆಹರಿಸಲಾರದು. ಅದಕ್ಕೆಲ್ಲಾ ಇರುವುದೊಂದೇ ಪರಿಹಾರ ಮಾರ್ಗವೆಂದರೆ ಗಾಂಧಿ ಮಾರ್ಗ" ಎಂದು ಅಭಿಪ್ರಾಯಪಟ್ಟಿರುವುದು ಗಾಂಧಿ ವಿಚಾರಗಳ ಮಹತ್ವವನ್ನು ಸಾರುತ್ತದೆ. ಇಂದು ಜಗತ್ತಿಗೆ ಬೇಕಿರುವುದು ಲಕ್ಷ ಲಕ್ಷ ಸಂಖ್ಯೆಯ ಗಾಂಧೀಜಿಗಳೇ ವಿನಃ ಲಕ್ಷ ಲಕ್ಷ ಬಿಲ್‌ಗೇಟ್ಸ್ ಅಲ್ಲ. ನಮ್ಮ ದೇಶದ ಕರೆನ್ಸಿಯಲ್ಲಿರುವ (ನೋಟುಗಳು) ಗಾಂಧೀಜಿಯವರನ್ನು ಜನರು ತಮ್ಮ ಹೃದಯದೊಳಕ್ಕೆ ಒಂದಷ್ಟು ಬಿಟ್ಟುಕೊಳ್ಳಬೇಕಿದೆ.

ಗಣ್ಯರು ನೀಡಿರುವ ಅಭಿಪ್ರಾಯಗಳಿಂದ ಗಾಂಧೀಜಿ ಅವರ ವ್ಯಕ್ತಿತ್ವದ ಹಿರಿಮೆ ನಮಗೆ ತಿಳಿಯುತ್ತದೆ. ಇದರ ಪ್ರಕಾರ ಇಂದಿನ ಜಗತ್ತಿನ ಎಲ್ಲ ಜಟಿಲ ಸಮಸ್ಯೆಗಳಿಗೆ ಗಾಂಧೀಜಿ ಅವರ ವಿಚಾರಗಳಲ್ಲಿ ಪರಿಹಾರವಿದೆ. ಈ ಕಾರಣದಿಂದಲೇ ನಮ್ಮ ರಾಷ್ಟ್ರಪಿತನನ್ನು ನಾವೆಲ್ಲಾ ತಿಳಿದು ಬದುಕುವುದೇ ನಿಜವಾದ ಸಾರ್ಥಕ ಜೀವನವೆನ್ನಬಹುದು. ನಾವು ಹೊಸದಾಗಿ ಯಾವ ಸಾಹಿತ್ಯ ವಿಚಾರಗಳನ್ನು ಗಾಂಧೀಜಿ ಅವರ ಬಗ್ಗೆ ಸೃಷ್ಟಿಸುವ ಅಗತ್ಯವಿಲ್ಲ. ಪ್ರಸ್ತುತ ನಮ್ಮಲ್ಲಿ ಲಭ್ಯವಿರುವ ಈ ಅಂಶಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಕಾರ್ಯತ್ವರಿತವಾಗಿ, ಆಂದೋಲನದೋಪಾದಿಯಲ್ಲಿ ಆಗಬೇಕಿದೆ. ಗಾಂಧೀಜಿ ಹಚ್ಚಿರುವ ಜ್ಯೋತಿಯನ್ನು ಆರಿಹೋಗದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯವಾಗಿದೆ. ಗಣ್ಯರೊಬ್ಬರು ಹೇಳಿದಂತೆ "ಗಾಂಧೀಜಿ ತತ್ವಗಳು ಕತ್ತಲಿನ ಸಮಾಜಕ್ಕೆ ದೀವಟಿಗೆ. ಅವರ ಸತ್ಯ, ಅಹಿಂಸೆ, ಸ್ವದೇಶಿ ತತ್ವಗಳು ಬದುಕಿನ ದಾರಿ ಹಸನುಗೊಳಿಸಲು ನೇಗಿಲಿದ್ದಂತೆ". ಇಂಗ್ಲೆಂಡಿನ ಇತಿಹಾಸಕಾರ ಅರ್ನಾಲ್ಡ್ ಟಾಯ್ನ್ ಬಿ ಗಾಂಧೀಜಿ ಅವರ ವಿಚಾರಗಳ ಮಹತ್ವವನ್ನು ತಿಳಿಸುತ್ತಾ "ಜಗತ್ತಿನ ಎಲ್ಲ ಜಟಿಲ ಸಮಸ್ಯೆಗಳಿಗೆ ಪರಿಹಾರ ಮಾರ್ಗವೆಂದರೆ ಭಾರತೀಯ ಮಾರ್ಗ ಒಂದೇ, ಅರ್ಥಾತ್ ಗಾಂಧಿಮಾರ್ಗ" ಎಂಬ ಮಾತುಗಳ ಮೂಲಕ ಗಾಂಧಿ ವ್ಯಕ್ತಿ ವಿಚಾರಗಳನ್ನು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಇಂದು ನಾವು ಗಾಂಧಿ ಮನಸ್ಸಿನ ಪೌರರನ್ನು ಸೃಷ್ಟಿಸುವುದರ ಮೂಲಕ ನಾವು ಬಡವರ ಪರವಾಗಿರುವ, ರೈತರ ಪರವಾಗಿರುವ, ಗ್ರಾಮೀಣಜನರ ಪರವಾಗಿರುವ ಮನಸ್ಸಿನ ಪೌರರನ್ನು ತಯಾರುಮಾಡಬೇಕಿದೆ. ಆಗ ಮಾತ್ರ ಸುಸ್ಥಿರ, ನೆಮ್ಮದಿಯ ಸಮಾಜ ನಿರ್ಮಾಣ ಸಾಧ್ಯ. ಇದೇ ನಾವೆಲ್ಲ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರಿಗೆ ಸಲ್ಲಿಸುವ ನಿಜವಾದ ಗೌರವ.

ಸಾಧಕರ ಸಂದರ್ಶನ

# ಆಶುಕವಿಯ ಸಂದರ್ಶನ



**ಸಾಹಿತಿ ಶ್ರೀಯುತ ರಾಮಣ್ಣ ಬ್ಯಾಟಿ**


**ಸಂದರ್ಶಕರು,**

**ಪ್ರಶಾಂತ ಹೆಚ್. ಮೇರವಾಡೆ,**
ಉಪನ್ಯಾಸಕರು, ಎಂ.ಕಾಂ. ವಿಭಾಗ
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ

**ಶಶಿಕಲಾ ಬಿ. ಹಳ್ಳಿಕೇರಿ**
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ


ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಮಟ್ಟದ ಸಾಧನೆಯನ್ನು ಮಾಡಿ, ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿರುವವರು ಮತ್ತು ರಾಜ್ಯಪ್ರಶಸ್ತಿಯನ್ನು ಮುಡಿಗೇರಿಸಿ ಕೊಂಡವರು ರಾಮಣ್ಣ ಬ್ಯಾಟಿ. ಇವರು ಮೂಲತಃ ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನವರು. ಮನಿಹಾಳ – ಸುರೇಬಾನಲ್ಲಿ ದೊಡ್ಡಪ್ಪ ಮತ್ತು ಚೆನ್ನಬಸಮ್ಮ ದಂಪತಿಯ ಮಗನಾಗಿ 1951ರ ಡಿಸೆಂಬರ್ 06ರಂದು ಜನಿಸಿದವರು. ದೇವಾಂಗ (ನೇಕಾರ) ಜನಾಂಗದವರಾದ ರಾಮಣ್ಣನವರು ಓದಿದ್ದು ನಾಲ್ಕನೇ ತರಗತಿಯ ವರೆಗೆ ಮಾತ್ರ. “ಮೂರನೇ ತರಗತಿಯಲ್ಲಿ ನನ್ನ ಹೆಸರಿದ್ದರೂ ನಾನು ಒಂದನೇ ಕ್ಲಾಸಿನಲ್ಲಿ ಕೂರುತ್ತಿದ್ದೆ. ಆದರೂ ನನ್ನನ್ನು ಪಾಸ್ ಮಾಡಿ ನಾಲ್ಕನೇ ತರಗತಿಗೆ ಕಳುಹಿಸಿದರು” ಎಂದು ಸ್ವತಃ ರಾಮಣ್ಣನವರೇ ಹೇಳಿಕೊಳ್ಳುತ್ತಾರೆ.

ಅಸಲೀ ಸಂಗತಿಯೇನೆಂದರೆ ರಾಮಣ್ಣನವರು ನಾಲ್ಕನೇ ತರಗತಿ ತನಕ ಶಾಲೆಗೆ ಹೋದರೂ ಅಲ್ಲಿ ಒಂದಕ್ಷರವನ್ನೂ ಕಲಿಯಲು ಸಾಧ್ಯವಾಗಿರಲಿಲ್ಲ. ತಮ್ಮ ಮಗ ಓದಿ ದೊಡ್ಡ ವ್ಯಕ್ತಿಯಾಗಬೇಕು ಎನ್ನುವ ಹಂಬಲ ರಾಮಣ್ಣನವರ ತಾಯಿಯದ್ದಾಗಿತ್ತು. ರಾಮಣ್ಣ ಅವರು ಶಿಕ್ಷಣವನ್ನು ಮೊಟಕುಗೊಳಿಸಿದ್ದರಿಂದ ಅವರ ತಾಯಿ ತುಂಬಾ ನೊಂದುಕೊಂಡಿದ್ದರು. ಅಮ್ಮನ ಆಸೆಯನ್ನು ಈಡೇರಿಸಬೇಕು, ತಾನು ಓದುವುದನ್ನು ಕಲಿಯಲೇಬೇಕು ಎಂದು ಪಣ ತೊಟ್ಟ ರಾಮಣ್ಣ ಬ್ಯಾಟಿಯವರು ಮಾಡಿದ್ದೇನು ಗೊತ್ತಾ? ಅಲ್ಲಿ ಇಲ್ಲಿ ಅಂಟಿಸಿದ್ದ ಸಿನಿಮಾ ಪೋಸ್ಟರು, ಸಿಕ್ಕ ಸಿಕ್ಕ ಬೋರ್ಡುಗಳನ್ನೆಲ್ಲಾ ನೋಡಿ ಓದಲು ಕಲಿತರು. ಅದೊಂದು ದಿನ ಜಲಶಂಕರದ ಆಲದ ಮರದ ಕೆಳಗೆ ಕೂತು ಶ್ರೀ ಸತ್ಯನಾರಾಯಣನ ಪೂಜೆ ಮಾಡಿ, ತಾಯಿಯ ಮುಂದೆ ಕುಳಿತು ಸತ್ಯನಾರಾಯಣನ ಸಂಪೂರ್ಣ ಚರಿತೆಯನ್ನು ಓದಿ ಹೇಳಿದರು. ಆಗ ರಾಮಣ್ಣ ಬ್ಯಾಟಿ ಅವರ ಹೆತ್ತತಾಯಿಯ ಮನಸ್ಸಿನಲ್ಲಾದ ಸಂತಸಕ್ಕೆ ಪಾರವೇ ಇರಲಿಲ್ಲ. ಇದೇ ಸಂತಸದಲ್ಲಿದ್ದ ರಾಮಣ್ಣನವರ ಬದುಕಿನಲ್ಲಿ ಮತ್ತೊಂದು ಮಹತ್ತರ ಘಟನೆ ನಡೆಯಿತು. ಆ ಒಂದು ದಿನ ಜಲಶಂಕರದ ನೀರಿನ ಝರಿಯಲ್ಲಿ ನೀರಿನ ಜೊತೆ ಮರ ಗಿಡದ ಎಲೆಗಳು ಹರಿದು ಬರುತ್ತಿತ್ತು. ಎಲೆಯನ್ನು ತೆಗೆದು ಹಾಕುವಾಗ ಎಲೆಗಳ ಜೊತೆ ಬಂದ ಹಾವನ್ನು ಕೈಯಲ್ಲಿ ಹಿಡಿದುಕೊಂಡು ಅದರ ಜೊತೆ ಮಾತನಾಡುತ್ತಾ ಪರಮಾತ್ಮನನ್ನು ಬೇಡಿಕೊಂಡು ಒಂದು ಪದ್ಯ ಹೇಳಿದರು. ತಮಗೆ ಅರಿವಿಲ್ಲದೆ ಬಂದ ಆ ಅಮೃತ ವಾಕ್ಯಗಳೇ ಮುಂದೆ ಲೆಕ್ಕವಿಡದಷ್ಟು ಕವನ, ಪುರಾಣ, ಚರಿತ್ರೆಗಳನ್ನು ಬರೆಯಲು ಮುನ್ನುಡಿಯಾಯಿತು. ಚೌಪದಿ, ಷಟ್ಪದಿ ಮತ್ತು ತ್ರಿಪದಿಯ ಪ್ರಕಾರಗಳಲ್ಲಿ ಪದ್ಯಗಳನ್ನು ರಚಿಸುವುದು ರಾಮಣ್ಣನವರ ಶೈಲಿ. ಇಷ್ಟೆಲ್ಲಾ ಹಿನ್ನೆಲೆ ಹೊಂದಿರುವ ರಾಮಣ್ಣ ಬ್ಯಾಟಿ ಅವರನ್ನು ಯಾತಾಳಿ ಚನ್ನಬಸಪ್ಪ ನವರು ಪ್ರಸಿದ್ಧಿಪಡಿಸಿದರು. ಶ್ರೀ ರಾಮಣ್ಣ ಬ್ಯಾಟಿಯವರೊಂದಿಗೆ ಸಂದರ್ಶನ ಮಾಡಿ ಅದರ ಆಯ್ದ ಭಾಗವನ್ನು ಪ್ರಕಟಿಸಲಾಗಿದೆ.

**ವಿ. ವಿ.:** ತಾವು ಗದುಗಿಗೆ ಬಂದಿದ್ದು ಯಾವಾಗ ಮತ್ತು ಯಾವ ಕಾರಣಕ್ಕೆ?

**ರಾ.ಬ್ಯಾ.:** ಗದುಗಿಗೆ ಬಂದಿದ್ದಕ್ಕೆ ಮೂಲ ಕಾರಣ ಕಿತ್ತು ತಿನ್ನುವ ಬಡತನ. ಸರಿಸುಮಾರು ನಾನು ಹದಿನೈದನೇ ವಯಸ್ಸಿನಲ್ಲಿದ್ದಾಗ. ಅಂದರೆ, 1966 ರಲ್ಲಿ ಗದುಗಿಗೆ ಬಂದು ನೆಲಸಿದೆವು. ನಂತರ ನಾನು ಜಲಶಂಕರಕ್ಕೆ ಹೋದೆ.

**ವಿ ವಿ.:** ತಮ್ಮ ತಂದೆ ತಾಯಿಯು ಯಾವ ಉದ್ಯೋಗ ಮಾಡುತ್ತಿದ್ದರು ?

**ರಾ.ಬ್ಯಾ. :** ತಂದೆ ಕಾಶೀ ಪಂಡಿತರ ಕಡೆ ಜ್ಯೋತಿಷ್ಯ ಕಲಿತು ಜ್ಯೋತಿಷ್ಯವನ್ನು ಹೇಳುತ್ತಿದ್ದರು ಮತ್ತು ನೇಕಾರಿಕೆಯನ್ನು ಮಾಡುತ್ತಿದ್ದರು ಹಾಗೂ ತಾಯಿ ಗೃಹಿಣಿಯಾಗಿದ್ದರು.

**ವಿ. ವಿ.:** ಜಲಶಂಕರಕ್ಕೆ ಹೋಗಿದ್ದು ಯಾಕೆ?

**ರಾ.ಬ್ಯಾ.:** ನಮ್ಮ ತಂದೆ ಶಿವನ ಆರಾಧಕರಾಗಿರುವುದರಿಂದ ಶ್ರೀ ಸತ್ಯನಾರಾಯಣನ ಪೂಜೆ ಮಾಡುವುದು ಬೇಡ ಅಂದಿದ್ದರಿಂದ ನಮ್ಮ ತಾಯಿಯ ಮನಸ್ಸಿಗೆ ನೋವುಂಟಾಗಿತ್ತು. ಆ ಕಾರಣ ತಾಯಿಯ ಆಸೆಯಂತೆ ಶಾಲೆಯನ್ನು ಕಲಿಯಲಾರದೆ ತಾಯಿಯ ಮನಸ್ಸನ್ನು ನೋಯಿಸಿದ ಕಾರಣ ನಾನು ಓದಲು ಕಲಿಯಬೇಕೆಂಬ ಹಂಬಲದಿಂದ ಅಲ್ಲಿ ಇಲ್ಲಿ ಅಂಟಿಸಿದ್ದ ಸಿನಿಮಾ ಪೋಸ್ಟರು, ಶಾಲೆಯ ಬೋರ್ಡು, ಸಿಕ್ಕ ಸಿಕ್ಕ ಬೋರ್ಡುಗಳನ್ನೆಲ್ಲಾ ನೋಡಿ ಓದಲು ಕಲಿತೆ. ಅದೊಂದು ದಿನ ಜಲಶಂಕರದ ಆಲದ ಮರದ ಕೆಳಗೆ ಕೂತು ಶ್ರೀ ಸತ್ಯನಾರಾಯಣ ಪೂಜೆ ಮಾಡಿ, ತಾಯಿಯ ಮುಂದೆ ಕುಳಿತು ಸತ್ಯನಾರಾಯಣನ ಸಂಪೂರ್ಣ ಚರಿತೆಯನ್ನು ಓದಿ ತೋರಿಸಿದೆನು. ಈ ಒಂದು ಕಾರಣಕ್ಕೆ ಜಲಶಂಕರಕ್ಕೆ ಹೋದೆನು.

**ವಿ. ವಿ.:** ತಾವು ಕವನ(ಪದ)ಗಳನ್ನು ಬರೆಯಲು ಪ್ರಾರಂಭಿಸಿದ್ದು ಯಾವಾಗ?

**ರಾ.ಬ್ಯಾ.:** ಆ ಒಂದು ದಿನ ಜಲಶಂಕರದ ನೀರಿನ ಝರಿಯಲ್ಲಿ ನೀರಿನ ಜೊತೆ ಮರ ಗಿಡದ ಎಲೆಗಳು ಹರಿದು ಬರುತ್ತಿತ್ತು. ಎಲೆಯನ್ನು ತೆಗೆದು ಹಾಕುವಾಗ ಎಲೆಗಳ ಜೊತೆ ಬಂದ ಹಾವನ್ನು ಕೈಯಲ್ಲಿ ಹಿಡಿದುಕೊಂಡು ಅದರ ಜೊತೆ ಮಾತನಾಡುತ್ತ, ಪರಮಾತ್ಮನನ್ನು ಬೇಡಿಕೊಳ್ಳುವಾಗ ಒಂದು ಪದ್ಯ ಹೇಳಿದೆ.

**"ಜನುಮ ಜನುಮದ ಪಾಪ ತೊಳೆಯಲ್ಕೆ**
**ನಾ ಬಂದೆ ಜಗದೀಶ ನಿನ್ನಯಾ ಭವ್ಯ ಸನ್ನಿಧಿಗೆ**
**ಗದುಗಿನಾ ಪುರದ ಬಳಿಯಿರುವ**
**ನಿನ್ನ ಬೆಟ್ಟದಲ್ಲಿ ಶೃಂಗಾರ ಮೆರೆದ**
**ಶಿಖರ ಮಧ್ಯದಲಿ ಪರಮ ಪಾವನನಾದ**
**ಪರಶಿವನು ಧರೆಗಿಳಿದು ಜಲದಲಿ ತಾ ಜನಿಸಿ ನಿತ್ಯ ಜಲಶಂಕರನೆನಿಸಿದ"**

ಹೀಗೆ ಈ ಒಂದು ಪದ್ಯ ಬರೆದ ನಂತರ ಇನ್ನೊಂದು ಪದ್ಯ ಬರೆಯಬೇಕೆನಿಸಿ ಇನ್ನೊಂದು ತೋಂಟದ ಸಿದ್ದಲಿಂಗೇಶ್ವರನ ಮೇಲೆ ಪದ್ಯ ರಚಿಸಿದೆ. ಮುಂದೆ ಅನೇಕ ಕವನ, ಪುರಾಣ, ಚರಿತ್ರೆಗಳನ್ನು ರಚಿಸುವಂತಾಯಿತು.

**ವಿ. ವಿ.:** ತಾವು ರಚಿಸಿದ ಮೊದಲನೆ ಕಾವ್ಯ ಯಾವುದು?

**ರಾ.ಬ್ಯಾ.:** ನನ್ನ ಮೊದಲನೆ ಕಾವ್ಯ "ಸಿದ್ದಲಿಂಗನ ಕಾವ್ಯಸುಧೆ" ನಂತರ ಎರಡನೆ ಕಾವ್ಯ 'ಕಪ್ಪತ್ತ ಕಲ್ಪವೃಕ್ಷ'.

**ವಿ. ವಿ.:** ತಾವು ಎಷ್ಟು ಪುರಾಣಗಳನ್ನು ಬರೆದಿದ್ದೀರಿ?

**ರಾ.ಬ್ಯಾ.:** ನಾನು ಇಲ್ಲಿಯವರೆಗೆ 64 ಕೃತಿಗಳನ್ನು ಬರೆದಿದ್ದೇನೆ. ಮುಂದುವರೆದು ಈ ಸದ್ಯ ಇನ್ನೊಂದು ರಾಮಾಯಣ ಕೃತಿಯನ್ನು ಬಿಡುಗಡೆ ಮಾಡಲು ತಯಾರಿ ನಡೆಯುತ್ತಿದೆ.

**ವಿ. ವಿ.:** ಈ ಎಲ್ಲ ಕೃತಿಗಳಲ್ಲಿ ತಮಗೆ ಸಮಾಧಾನವನ್ನು ತಂದು ಕೊಟ್ಟ ಕೃತಿ ಯಾವುದು?

**ರಾ.ಬ್ಯಾ.:** ನನ್ನ ಎಲ್ಲಾ ಕೃತಿಗಳು ನನಗೆ ಸಮಾಧಾನ ತಂದಿವೆ, ಆದರೆ ಅತೀ ಹೆಚ್ಚು ಸಮಾಧಾನ ತಂದ ಕೃತಿಯೆಂದರೆ ಅಂಬೇಡ್ಕರ್ ಪುರಾಣ ಯಾಕೆಂದರೆ ಇದು ಅನುಭವಿ ಕೃತಿಯಾಗಿದೆ, ಮೊದಲೇ ಜಾತಿವಾದಿಯಾದ ನಾನು ಅಂಬೇಡ್ಕರ ಪುರಾಣವನ್ನು ಮನಸಿಲ್ಲದೆ ಪ್ರಾರಂಭಿಸಿದೆನು. ಹೀಗೆ ಅಂಬೇಡ್ಕರ್ ಅವರ ಬಗ್ಗೆ ಬರೆಯುತ್ತ, ಅವರು ತಮ್ಮ ಜೀವನದಲ್ಲಿ ಎದುರಿಸಿದ ಕಷ್ಟಗಳನ್ನು ನೆನೆದು ನನ್ನ ಕಣ್ಣಂಚಲ್ಲಿ ನೀರು ತುಂಬಿತ್ತು. ಅದೇ ಮನಸ್ಥಿತಿಯಲ್ಲಿ ರಚಿಸಿದ ಈ ಒಂದು ಕೃತಿ ನನಗೆ ತೃಪ್ತಿಯನ್ನು ತಂದು ಕೊಟ್ಟಿದೆ. ಒಂದು ವಿಚಿತ್ರ ಅಂದರೆ ಮುದ್ರಣಕ್ಕೆ ಕಳುಹಿಸುವಾಗ 8 ಜನ ತಜ್ಞರ ನ್ನೊಳಗೊಂಡ ಸಮಿತಿ ಮಾಡಿ ಆ ಕೃತಿಯನ್ನು ಎಂ. ಎಂ. ಕಲಬುರ್ಗಿ ಯವರಿಗೆ ಕಳುಹಿಸಿದರು. ಅವರು 6 ತಿಂಗಳ ಕಾಲ ತಮ್ಮಲ್ಲಿಯೇ ಇರಿಸಿಕೊಂಡು ಇದನ್ನು ಹಾಗೇ ಮುದ್ರಣ ಮಾಡಿ ಪ್ರಕಟಿಸಿ ಎಂದು ತಿಳಿಸಿದರು.

**ವಿ. ವಿ.:** ತಮಗೆ ಪದ ಮತ್ತು ಕೃತಿಗಳನ್ನು ಬರೆಯಲು ಸಹಾಯ ಮತ್ತು ಸಹಕಾರವನ್ನು ನೀಡಿದವರು ಯಾರು?

**ರಾ.ಬ್ಯಾ.:** ಗದುಗಿನ ಶ್ರೀ ತೋಂಟದ ಸಿದ್ದಲಿಂಗೇಶ್ವರ ಸ್ವಾಮಿಗಳು ನಿರಂತರವಾಗಿ ಸಹಕಾರ ಮತ್ತು ಸಹಾಯವನ್ನು ನೀಡುತ್ತಿದ್ದಾರೆ.



**ವಿ. ವಿ.:** ತಾವು ರಚಿಸಿದ ವಿವಿಧ ಕೃತಿಗಳಿಗೆ ಪ್ರಶಸ್ತಿ ಅಥವಾ ಬಿರುದುಗಳೇನಾದರು ಬಂದಿವೆಯಾ?

**ರಾ.ಬ್ಯಾ.:** ಒಟ್ಟು 4 ಪ್ರಶಸ್ತಿಗಳಾದ ಅಂಬೇಡ್ಕರ್ ನ್ಯಾಷನಲ್ ಅವಾರ್ಡ್, ಅವ್ವ ಪ್ರಶಸ್ತಿ, ದೇವರ ದಾಸಿಮಯ್ಯ ಪ್ರಶಸ್ತಿ, ರಾಜ್ಯಪ್ರಶಸ್ತಿ ಸಂದಿವೆ. ಮತ್ತು ಭಕ್ತಕವಿ, ಆಶುಕವಿ, ಆಧುನಿಕ ಪಂಪ ಮತ್ತು ಅಭಿನವ ವ್ಯಾಸ ಎಂಬ 4 ಬಿರುದುಗಳೂ ಕೂಡ ಬಂದಿವೆ.

**ವಿ. ವಿ.:** ತಮ್ಮ ಅಂಕಿತನಾಮ ಯವುದು ?

**ರಾ.ಬ್ಯಾ.:** ನಾನು ಜೇಡರ ರಾಮ ಎಂಬ ಅಂಕಿತ ನಾಮವನ್ನು ಇಟ್ಟುಕೊಂಡಿದ್ದೇನೆ.

**ವಿ. ವಿ.:** ತಾವು ರಚಿಸಿದ ಷಟ್ಪದಿ ಪದ್ಯ ಯಾವುದು?

**ರಾ.ಬ್ಯಾ.:** ನಾ ರಚಿಸಿದ ಷಟ್ಪದಿ ಪದ್ಯ ಎಂದರೆ 34 ನುಡಿಯ 'ಶಬರಾಂಬೆಯ' ಸುಪ್ರಭಾತ.

ಹೀಗೆ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಹಿತಿ ಶ್ರೀಯುತ ರಾಮಣ್ಣ ಬ್ಯಾಟಿಯವರ ಸಂದರ್ಶನವನ್ನು ಮಾಡಿದ್ದು ನಮಗೆ ತುಂಬಾ ಹೆಮ್ಮೆಯನಿಸುತ್ತಿದೆ.

## ವಿಶೇಷ ಸಮಾವೇಶ

### ವಿಶ್ವವಿದ್ಯಾಲಯದಲ್ಲಿ ರೈತರ ಆದಾಯ ದ್ವಿಗುಣ ಸಂವಾದ

### An Interactive Session on “Doubling Farmers 'Income'

# “ಆತ್ಮನಿರ್ಭರ ಯೋಜನೆ ರೈತರ ಆದಾಯ ವೃದ್ಧಿಗೆ ಸಹಕಾರಿ”

ಡಾ. ಅಶೋಕ ದಳವಾಯಿ



ಡಾ. ಅಶೋಕ ದಳವಾಯಿಯವರು ವಿಶ್ವವಿದ್ಯಾಲಯದ ರೈತರ ಆದಾಯ ದ್ವಿಗುಣ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡುತ್ತಿರುವುದು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗದ ಸಭಾಂಗಣದಲ್ಲಿ ರೈತರ ಆದಾಯ ದ್ವಿಗುಣ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಮಳೆ ಆಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಡಾ. ಅಶೋಕ ದಳವಾಯಿ ಭಾ.ಆ.ಸೇ ಅವರು ಭಾಗವಹಿಸಿದ್ದರು. ಡಾ. ಅಶೋಕ ದಳವಾಯಿಯವರು, 1984 ರ ಬ್ಯಾಚಿನ ಭಾರತೀಯ ಆಡಳಿತ ಸೇವೆಯ ಅಧಿಕಾರಿಯಾಗಿ ಒಡಿಶಾ ಕೇಡರ್‌ನಲ್ಲಿ ಸೇವೆ ಸಲ್ಲಿಸಿದವರು. ಇವರು ಒಡಿಶಾ ಮತ್ತು ಕರ್ನಾಟಕ ಎರಡು ರಾಜ್ಯಗಳಲ್ಲಿ ಕ್ಷೇತ್ರ ಮಟ್ಟ ಮತ್ತು ನೀತಿ ಸೂತ್ರೀಕರಣ ಹಂತಗಳಲ್ಲಿ, ಸೇವೆ ಸಲ್ಲಿಸಿದ್ದು, 2015 ರಿಂದ ಭಾರತ ಸರ್ಕಾರದ ಕೃಷಿ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಪ್ರಸ್ತುತ ರಾಷ್ಟ್ರೀಯ ಮಳೆ ಆಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಭಾರತ ಸರ್ಕಾರಕ್ಕಾಗಿ ಹಲವಾರು ನೀತಿಗಳ ಕರಡು ರಚಿಸಿದ್ದಾರೆ, ಅವುಗಳಲ್ಲಿ ಪ್ರಮುಖವಾದದ್ದು ಕೃಷಿಯ ಕುರಿತಾದ ವರದಿ. ರೈತರ ಆದಾಯಗಳನ್ನು ದ್ವಿಗುಣಗೊಳಿಸುವ ಸಮಿತಿಯ ಅಧ್ಯಕ್ಷರಾಗಿ, ಕೃಷಿ ಕ್ಷೇತ್ರದಲ್ಲಿ ಮಾದರಿ ಬದಲಾವಣೆಯನ್ನು ಕೇಂದ್ರೀಕರಿಸಿ ಮತ್ತು ಆದಾಯ ಸುರಕ್ಷತೆ ಹಾಗೂ ರೈತರ ಕಲ್ಯಾಣಕ್ಕೆ ಒತ್ತು ನೀಡುವಂತಹ ಹದಿನಾಲ್ಕು ಸಂಪುಟ ಕಾರ್ಯತಂತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದಾರೆ.

ಈ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ಅಶೋಕ ದಳವಾಯಿ ಅವರು, ರೈತರು ಸ್ಥಳೀಯ ಹಾಗೂ ವಿದೇಶಿ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಬೆಳೆಗಳನ್ನು ಬೆಳೆದು ಸಂಸ್ಕರಿಸಿ ಪೂರೈಕೆ ಮಾಡುವ ವ್ಯವಸ್ಥೆ ಜಾರಿ ಮಾಡುವ

ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಬಹುದಾಗಿದೆ ಎಂದು ಅಭಿಪ್ರಾಯಪಟ್ಟರು. ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಆತ್ಮನಿರ್ಭರ ಯೋಜನೆಯು ರೈತರ ಆದಾಯ ದ್ವಿಗುಣಗೊಳಿಸುವ ನಿಟ್ಟಿನಲ್ಲಿ ಸಹಕಾರಿಯಾಗಲಿದೆ. ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆ ಮಾಡಿಕೊಂಡು ಕೃಷಿಯಲ್ಲಿ ತಾಂತ್ರಿಕತೆಯನ್ನು ಅಳವಡಿಸಿ ಉತ್ತಮ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸಿ ಕೊಳ್ಳಬಹುದಾಗಿದೆ. ಇದರಿಂದ ರೈತರು ಆರ್ಥಿಕ ಸಬಲತೆಯ ಕಡೆಗೆ ಸಾಗಬಹುದಾಗಿದೆ ಎಂದು ಹೇಳಿದರು.

ದೇಶದ ಬಡತನವನ್ನು ನಿರ್ಮೂಲನೆ ಮಾಡಬೇಕಾದರೆ ಕೃಷಿಯಿಂದ ಮಾತ್ರ ಸಾಧ್ಯವಾಗಿದ್ದು ಕೃಷಿ ಈ ದೇಶದ ಜನರ ಜೀವಾಳವಾಗಿದೆ. ಕೃಷಿಯಲ್ಲಿ ಯುವಜನತೆ ಪಾಲ್ಗೊಳ್ಳುವ ಮೂಲಕ ರೈತರ ಬೆಳೆಗಳಿಗೆ ಸೂಕ್ತ ಸಮಯದಲ್ಲಿ ಸೂಕ್ತ ಮಾರುಕಟ್ಟೆ ವ್ಯವಸ್ಥೆ ದೊರಕುವಂತೆ ಮಾಡಬೇಕು. ಈ ನಿಟ್ಟಿನಲ್ಲಿ ಸರ್ಕಾರವು ಸಹ ಕಾರ್ಯಪ್ರವೃತ್ತವಾಗಿದೆ ಎಂದು ತಿಳಿಸಿದರು. ಕೇಂದ್ರ ಸರ್ಕಾರವು ಮಂಡಿಸಿದ ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ 1 ಲಕ್ಷ ಕೋಟಿ ಅನುದಾನ ಮೀಸಲಿಡಲಾಗಿದ್ದು ಅದನ್ನು ರೈತರು ಗುಣಮಟ್ಟದ ಬೆಳೆ ಬೆಳೆಯಲು ಹಾಗೂ ಸಂಗ್ರಹಕ್ಕಾಗಿ ಅತ್ಯಾಧುನಿಕ ಗೋಡೌನ್ ನಿರ್ಮಾಣ ಸೇರಿದಂತೆ ಇತರೆ ಕೃಷಿ ಕಾರ್ಯಗಳಿಗೆ ಬಳಕೆ ಮಾಡಲಾಗುತ್ತದೆ. ಕೃಷಿ ಉತ್ಪನ್ನ ಸಂಸ್ಕರಣ ಘಟಕಗಳ ಮೂಲಕ ವಿದೇಶಿ ಮಾರುಕಟ್ಟೆಗನುಗುಣವಾಗಿ ರೈತರ ಉತ್ಪನ್ನಗಳನ್ನು ಸಂಸ್ಕರಣೆ ಮಾಡಿ ಸಾಗಾಟ ಮಾಡುವುದರಿಂದ ರೈತರಿಗೆ ಉತ್ತಮ ಆದಾಯ ದೊರೆಯಲಿದೆ ಎಂದು ಹೇಳಿದರು.

ರೈತರು ತಮ್ಮ ಜಮೀನಿನಲ್ಲಿ ಬೆಳೆದ ಬೆಳೆಗೆ ಮೊದಲೇ ವಿಮೆ ಮಾಡಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಪ್ರಕೃತಿ ವಿಕೋಪಗಳಂತಹ ಸಂದರ್ಭಗಳಲ್ಲಿ ರೈತರಿಗೆ ವಿಮೆಯಿಂದ ಪರಿಹಾರ ದೊರೆಯಲಿದೆ ಎಂದರು. ಅಲ್ಲದೇ ರೈತರು ಮೊದಲೇ ಕಂಪನಿಗಳ ಜೊತೆಗೆ ಬೆಳೆಗಳನ್ನು ಖರೀದಿಸುವ ಬಗ್ಗೆ ಒಪ್ಪಂದಗಳನ್ನು ಮಾಡಿಕೊಳ್ಳಬೇಕು ಇದರಿಂದ ರೈತರಿಗಾಗಿ ನಷ್ಟವನ್ನು ತಪ್ಪಿಸಬಹುದು ಎಂದು ಹೇಳಿದರು.

ದೇಶವು ಹೈನುಗಾರಿಕೆ ಕ್ಷೇತ್ರದಲ್ಲಿ ಪ್ರಥಮ ಸ್ಥಾನದಲ್ಲಿದೆ. ಈ ಹಿಂದೆ ಅಮೇರಿಕವು ಹೈನೋದ್ಯಮದಲ್ಲಿ ಪ್ರಥಮ ಸ್ಥಾನದಲ್ಲಿತ್ತು. ಪ್ರಸ್ತುತ ಹೈನೋದ್ಯಮದಲ್ಲಿ ಅಮೇರಿಕದ ಎರಡರಷ್ಟು ಹೈನುಗಾರಿಕೆ ಉತ್ಪನ್ನಗಳನ್ನು ದೇಶವು ತಯಾರಿಸುತ್ತಿದೆ. ಗಾಂಧೀಜಿಯವರ ವಿಚಾರದಂತೆ ಗ್ರಾಮವನ್ನು ಕೇಂದ್ರವನ್ನಾಗಿಟ್ಟುಕೊಂಡು ಕೃಷಿ ಚಟುವಟಿಕೆ ಕೈಗೊಳ್ಳಬೇಕೆಂದು ತಿಳಿಸಿದರು.

ಈ ಸಂವಾದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿ, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಎಸ್., ವಿಶ್ವವಿದ್ಯಾಲಯದ ಉಪನ್ಯಾಸಕರು, ವಿದ್ಯಾರ್ಥಿಗಳು, ಕೃಷಿ ಇಲಾಖೆಯ ಹಿರಿಯ, ಕಿರಿಯ ಅಧಿಕಾರಿಗಳು, ಕೃಷಿ ಪಂಡಿತರು, ಮತ್ತು ರೈತರು ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ಈ ಸಂವಾದ ಕಾರ್ಯಕ್ರಮದಲ್ಲಿ ಪ್ರಗತಿಪರ ರೈತರು ಭಾಗಿಯಾಗಿದ್ದು, ಚರ್ಚಿಸಲಾದ ವಿಷಯ ರೈತರ ಆದಾಯ ದ್ವಿಗುಣದ ಬಗ್ಗೆ ಹಲವಾರು ಉಪಯುಕ್ತ ಮಾಹಿತಿಯನ್ನು ಪಡೆದುಕೊಂಡರು.

## ವಿದ್ಯಾರ್ಥಿಯ ಸಾಧನೆ
## ರಾಜ್ಯ ಪಥ ಸಂಚಲನ ಶಿಬಿರಕ್ಕೆ ಆಯ್ಕೆ



**ಹಾಲೇಶ್ ಕಟಗಿ,**
ಎಂ.ಕಾಂ.
ದ್ವಿತೀಯ ವರ್ಷದ ವಿದ್ಯಾರ್ಥಿ,
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ

ರಾಜ್ಯ ಪಥ ಸಂಚಲನ ಶಿಬಿರಕ್ಕೆ ಆಯ್ಕೆ ಪ್ರಕ್ರಿಯೆಯ ಮೊದಲ ಹಂತವನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಏರ್ಪಡಿಸಲಾಗಿದ್ದು, ನಮ್ಮ ವಿಶ್ವವಿದ್ಯಾಲಯದಿಂದ ಎಂ.ಕಾಂ. ದ್ವಿತೀಯ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಶ್ರೀ ಹಾಲೇಶ ಕಟಗಿ, ಇವರನ್ನು ಆಯ್ಕೆ ಮಾಡಲಾಯಿತು. ನಂತರ ನಮ್ಮ ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡವು ದಿನಾಂಕ 09 ರಿಂದ 12 ನೇ ನವೆಂಬರ್, 2020 ರವರೆಗೆ ಆಯೋಜಿಸಿದ್ದ ರಾಜ್ಯ ಪಥ ಸಂಚಲನ ಶಿಬಿರ (Pre-State RD Camp) ದಲ್ಲಿ ಶ್ರೀ ಹಾಲೇಶ ಕಟಗಿ ಇವರನ್ನು ಆಯ್ಕೆ ಮಾಡಿದರು. ನಂತರ South Zone Pre-State RD Camp ತಮಿಳುನಾಡಿನ, ತಿರುಚಿರಾಪಲ್ಲಿಯ ನ್ಯಾಷನಲ್ ಕಾಲೇಜಿನಲ್ಲಿ ದಿನಾಂಕ 27 ನೇ ನವೆಂಬರ್, 2020 ರಿಂದ 6ನೇ ಡಿಸೆಂಬರ್, 2020 ರವರೆಗೆ ನಡೆಯಿತು. ಅದರಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳನ್ನು ದೆಹಲಿ ರಾಜ್‌ಪಥ್ ಹಾಗೂ ಆಯ್ಕೆಯಾಗದ ವಿದ್ಯಾರ್ಥಿಗಳನ್ನು ರಾಜ್ಯ ಪಥಸಂಚಲನ ಶಿಬಿರಕ್ಕೆ ಆಯ್ಕೆ ಮಾಡಿದರು. ನಮ್ಮ ವಿಶ್ವವಿದ್ಯಾಲಯದಿಂದ ಶ್ರೀ ಹಾಲೇಶ ಕಟಗಿ ಅವರನ್ನು ಸಹ ರಾಜ್ಯ ಪಥಸಂಚಲನ ಶಿಬಿರಕ್ಕೆ ಆಯ್ಕೆಮಾಡಲಾಯಿತು. ರಾಜ್ಯ ಪಥಸಂಚನ ಶಿಬಿರವನ್ನು ದಿನಾಂಕ 17 ರಿಂದ 28ನೇ ಜನವರಿ, 2021 ರವರೆಗೆ ವಿಶ್ವೇಶ್ವರಯ್ಯ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಟೆಕ್ನಾಲಜಿ, ಮುದ್ದೇನಹಳ್ಳಿ, ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

## ವಿಶೇಷ ವರದಿ

# ಖಾದಿ ಸ್ವಾವಲಂಬನೆಯ ಸಂಕೇತ

### (ಸಬರಮತಿ ಆಶ್ರಮದಲ್ಲಿ ನೂಲು ತಯಾರಿಕೆಗೆ ಚಾಲನೆ, ವಿ.ವಿ., ಆವರಣದಲ್ಲಿ ಖಾದಿ ಕಲರವ)




**ಶ್ರೀ ಪ್ರಕಾಶ ಎಸ್. ಮಾಚೇನಹಳ್ಳಿ**
ಉಪನ್ಯಾಸಕರು, ಎಂ.ಎ. ವಿಭಾಗ
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ


**"ಗ್ರಾಮ ಕೈಗಾರಿಕೆ ಎಂಬ ಸೌರವ್ಯೂಹದಲ್ಲಿ ಖಾದಿ ಸೂರ್ಯನಿದ್ದಂತೆ ಉಳಿದೆಲ್ಲ ಕೈಗಾರಿಕೆಗಳು ಖಾದಿ ಉದ್ಯಮದಿಂದ ಶಾಖ ಪಡೆದು ಸಂರಕ್ಷಣೆಗೊಳ್ಳುತ್ತವೆ."**

**–ಮಹಾತ್ಮ ಗಾಂಧೀಜಿ**



ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ದೇಸಿ ಮಳಿಗೆಗೆ ಚಾಲನೆ ನೀಡುತ್ತಿರುವುದು.

ಗಾಂಧೀಜಿಯವರ ವಿಚಾರಗಳ ಮೇಲೆ ನೆಲೆ ನಿಂತಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿರುವ ಸಬರಮತಿ ಆಶ್ರಮದಲ್ಲಿ (ಅಹಮದಾಬಾದಿನ ಗಾಂಧಿ ಸಬರಮತಿ ಆಶ್ರಮದ ಪ್ರತಿರೂಪ) ಮಾನ್ಯ ಕುಲಪತಿಗಳು ಚರಕದಿಂದ ಖಾದಿಯನ್ನು ನೂಲುವ ಕಾರ್ಯಕ್ಕೆ ಫೆಬ್ರುವರಿ 11, 2021 ರಂದು ಚಾಲನೆಯನ್ನು ನೀಡಿದರು. ಜೊತೆಗೆ ಖಾದಿ ಉತ್ಪನ್ನಗಳ ಪ್ರಚಾರ ಹಾಗೂ ಮಾರಾಟ ಕುರಿತಂತೆ, ವಿಶ್ವವಿದ್ಯಾಲಯದ ಆವರಣದಲ್ಲಿ "ದೇಸಿ ಮಳಿಗೆ"ಗೆ ಇದೇ ಸಂದರ್ಭದಲ್ಲಿ ಚಾಲನೆ ದೊರೆಯಿತು.

ಖಾದಿ ಸ್ವಾವಲಂಬನೆಯ ಪ್ರತೀಕ. ಹೆಚ್ಚು ಹೆಚ್ಚು ಖಾದಿ ಪ್ರಚಾರ ಮತ್ತು ಬಳಕೆಯಿಂದ ಸ್ವಾವಲಂಬಿ ಆರ್ಥಿಕತೆಯನ್ನು ಬಲಪಡಿಸಲು ಸಾಧ್ಯ. ಈ ಹಿನ್ನಲೆ ಮತ್ತು ಉದ್ದೇಶದೊಂದಿಗೆ ಚರಕದಿಂದ ನೂಲು ತಯಾರಿಕೆ, ತರಬೇತಿ, ಖಾದಿ ಉತ್ಪನ್ನಗಳ ಪ್ರಚಾರ, ಮಾರಾಟ ಹಾಗೂ ಉತ್ತೇಜನಗಳಂತಹ ಚಟುವಟಿಕೆಗಳನ್ನು ಸಬರಮತಿ ಆಶ್ರಮದಲ್ಲಿ ಕೈಗೊಳ್ಳಲಾಗುತ್ತಿದೆ.



ಖಾದಿಯ ಮಹತ್ವ, ಪ್ರಚಾರ, ಆಂದೋಲನ ಮತ್ತು ಉತ್ತೇಜನವು ಇತ್ತೀಚಿನದಲ್ಲ, ಇದು ಗಾಂಧೀಜಿಯವರೊಂದಿಗೆ ಬಿಡಿಸಲಾಗದ ನಂಟನ್ನು ಹೊಂದಿದೆ. ಚರಕ ಮತ್ತು ಖಾದಿ ಗಾಂಧೀಜಿಯ ಸಂಕೇತಗಳಾಗಿವೆ.

ಯಂತ್ರ ನಾಗರಿಕತೆಯ ವೈಪರಿತ್ಯಗಳಿಗೆ ವಿರೋಧವಾಗಿದ್ದ ಗಾಂಧೀಜಿಯವರು ಮನುಷ್ಯ ಮತ್ತು ಯಂತ್ರಗಳು ಒಟ್ಟಿಗೆ ಹೋಗಬೇಕು ಎಂದು ನಂಬಿದ್ದರು. ಯಂತ್ರಗಳು ಮನುಷ್ಯರನ್ನು ಆಳಬಾರದು ಎಂಬುವುದು ಅವರ ಕಾಳಜಿಯಾಗಿತ್ತು. ಹೀಗಾಗಿ ಮಾನವರಲ್ಲಿ ಅಸಮಾನತೆಯನ್ನು ಸೃಷ್ಟಿಸುವ ಯಂತ್ರ ನಾಗರಿಕತೆಗೆ ನನ್ನ ವಿರೋಧ ಇದೆ. ಮಾನವರ ನಡುವೆ ಸಂಬಂಧ ಬೆಸೆಯುವ ಚರಕ ಮಗ್ಗ, ಕುಲುಮೆ, ತಕಲಿ ಅಂತಹ ಯಂತ್ರಗಳಿಗೆ ಅಲ್ಲೆಂದು ಬಲವಾಗಿ ಪ್ರತಿಪಾದಿಸುವದರೊಂದಿಗೆ ಚರಕವೇ ನನಗೆ ಸ್ವರ್ಗವೆಂದು ಖಾದಿಯನ್ನು ಬಲವಾಗಿ ರೂಢಿಸಿಕೊಂಡು "ಗುಜರಾತಿ ಪೇಟದಿಂದ ಖಾದಿ ಟೋಪಿಗೆ" ಹಾಗೂ "ಸೂಟಿನಿಂದ ಖಾದಿ ಧೋತಿಗೆ" ಬದಲಾದರು. ಇದರೊಂದಿಗೆ 1920ರ ದಶಕದ ಆರಂಭದಲ್ಲಿಯೇ ಗಾಂಧೀಜಿಯವರು ಚರಕ ಕ್ರಾಂತಿಯ ಮೂಲಕ ಖಾದಿ ಉತ್ಪನ್ನಗಳ ಬಳಕೆ ಹೆಚ್ಚಿಸಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಜನ ಸಾಮಾನ್ಯರಲ್ಲಿ ಆಂದೋಲನಕ್ಕೆ ಮುನ್ನುಡಿಯನ್ನು ಬರೆದಿದ್ದರು.

ಗಾಂಧೀಜಿಯವರ ಪ್ರಬಲವಾದ ಖಾದಿಯ ಪ್ರಚಾರ ಮತ್ತು ಪ್ರೇರಣೆಯ ಆಂದೋಲನಕ್ಕೆ ಪರಿಣಾಮಕಾರಿ ಫಲಿತಾಂಶದ ರೂಪಕವಾಗಿ ಕರ್ನಾಟಕದ ಚಾಮರಾಜ ನಗರ ಜಿಲ್ಲೆಯ ಬದನವಾಳು ಗ್ರಾಮವನ್ನು ಉದಾಹರಣೆಯನ್ನಾಗಿ ತೆಗೆದುಕೊಳ್ಳಬಹುದು. ಇಲ್ಲಿ ಗಾಂಧೀಜಿಯವರ ಖಾದಿ ವಿಚಾರಗಳಿಗೆ ಓಗೊಟ್ಟು ನಾಲ್ವರು ದಲಿತ ಮಹಿಳೆಯರು "ಖಾದಿ ಗ್ರಾಮೋದ್ಯೋಗ" ಕೇಂದ್ರವನ್ನು ಸ್ಥಾಪಿಸಿದ್ದರು. 1927ರಲ್ಲಿ ಗಾಂಧೀಜಿಯವರು ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಬದನವಾಳು ಗ್ರಾಮಕ್ಕೆ ಭೇಟಿಯನ್ನು ನೀಡಿದ್ದರು. ಇಲ್ಲಿಯ ನೂಲು ತಯಾರಿಕೆ, ಖಾದಿ ಉತ್ಪನ್ನಗಳ ಉತ್ಪಾದನೆಯನ್ನು ಕಂಡು ಸಂತಸವನ್ನು ವ್ಯಕ್ತಪಡಿಸಿದ್ದರು. ಇಂದಿಗೂ ಇಲ್ಲಿ ನೂಲು ತಯಾರಿಕೆಯ ತರಬೇತಿ ಹಾಗೂ ಖಾದಿ ಉತ್ಪನ್ನಗಳ ಉತ್ಪಾದನೆ ಚಾಲ್ತಿಯಲ್ಲಿದೆ. ಇದಕ್ಕೆ ಇನ್ನೊಂದು ನಿದರ್ಶನವನ್ನು ಕಂಡುಕೊಳ್ಳುವುದಾದರೆ, ಗಂಗಾಧರ ರಾವ್ ದೇಶಪಾಂಡೆ ಅವರು 1925 ರಲ್ಲಿ ಬೆಳಗಾವಿಯ ಹುದಲಿಯಲ್ಲಿ ಸ್ಥಾಪಿಸಿದ "ಖಾದಿ ಉತ್ಪಾದನೆಯ ಸಂಘವು" ವಿವಿಧ ಬಗೆಯ ಖಾದಿ ವಸ್ತುಗಳ ಉತ್ಪಾದನೆಯಲ್ಲಿ ಇಂದಿಗೂ ಸಕ್ರಿಯವಾಗಿದೆ.

**"ಖಾದಿ ಕೇವಲ ಬಟ್ಟೆ ಅಲ್ಲ ಅದು ನಮ್ಮ ಸಂಕೇತ"**

ಹೀಗೆ ಗಾಂಧೀಜಿಯವರಿಂದ ಪ್ರೇರಣೆಗೊಂಡ ಖಾದಿಯು ಭಾರತೀಯರ ಸಂಕೇತವಾಗಿ ಚಾಲನೆಯಲ್ಲಿ ಇರುವುದನ್ನು ದೇಶದಲ್ಲಿ ಕಾಣಬಹುದಾಗಿದೆ.

ಈ ಹಿನ್ನೆಲೆಯ ಆಧರಿತವಾಗಿ ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಸಹಯೋಗ ಮತ್ತು ಸಹಕಾರದೊಂದಿಗೆ 4 ಚರಕಗಳನ್ನು ಸ್ಥಾಪಿಸಲಾಗಿದ್ದು, ಆಸಕ್ತಿ ಇರುವ ಸಾರ್ವಜನಿಕರು ಹಾಗೂ ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರುಗಳಿಗೆ ಚರಕದಿಂದ ನೂಲು ತಯಾರಿಕೆಯ ಕುರಿತು ತರಬೇತಿಯನ್ನು ನೀಡಲಾಗುತ್ತಿದೆ. ಈಗಾಗಲೇ ಎನ್.ಆರ್.ಎಲ್.ಎಮ್. ಅಡಿಯಲ್ಲಿರುವ ಕೆಲವು ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರುಗಳಿಗೆ ಈ ಕುರಿತು ಮಾಹಿತಿ ಹಾಗೂ ತರಬೇತಿಯನ್ನು ನೀಡಲಾಗಿದೆ. ಆಶ್ರಮದ ಕಾರ್ಯಚಟುವಟಿಕೆಗಳಲ್ಲಿ ಸ್ವಯಂ ಸೇವಕರಾಗಿ ಕಾರ್ಯವನ್ನು ನಿರ್ವಹಿಸುತ್ತಿರುವ ವಿಶ್ವವಿದ್ಯಾಲಯದ 28 ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ಚರಕವನ್ನು ನೂಲುವ ತರಬೇತಿಯನ್ನು ಪಡೆದುಕೊಂಡಿದ್ದಾರೆ. ಜೊತೆಗೆ ಆಶ್ರಮದಲ್ಲಿರುವ ಖಾದಿ ಉತ್ಪನ್ನಗಳ ಘಟಕದಿಂದ ಆಶ್ರಮಕ್ಕೆ ಭೇಟಿ ನೀಡುವ ವೀಕ್ಷಕರಿಗೆ ಖಾದಿಯ ಮಹತ್ವ, ಪ್ರಚಾರ ಮತ್ತು ಮಾರಾಟವನ್ನು ಕುರಿತು ತಿಳಿಸಲಾಗುತ್ತಿದೆ.

ಗ್ರಾಮಗಳು ಸದೃಢವಾದರೆ ದೇಶ ಸದೃಢವಾಗುವುದು. ಗ್ರಾಮ ಕೈಗಾರಿಕೆ, ಗ್ರಾಮೋದ್ಯಮಗಳನ್ನು ಬಲಪಡಿಸುವುದರೊಂದಿಗೆ ಗ್ರಾಮ್ ಸ್ವರಾಜ್‌ನ್ನು ಸಾಧಿಸುವ ಗಾಂಧೀಜಿಯವರ ಆಶಯಗಳ ಅನುಸರಣೆಯಲ್ಲಿ ವಿಶ್ವವಿದ್ಯಾಲಯ ಸಾಗುತ್ತಿದೆ.




ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಚರಕವನ್ನು ನೂಲುವ ಮೂಲಕ ನೂಲು ಉತ್ಪಾದನೆಗೆ ಚಾಲನೆ ನೀಡುತ್ತಿರುವುದು.

## ವಿಶೇಷ ಕಾರ್ಯಾಗಾರ

# “ಪಂಚಾಯತ್ ರಾಜ್ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ”

### ಎರಡು ದಿನದ ಕಾರ್ಯಾಗಾರ



**ಗುರುದತ್ತ ರಾಯ್ಕರ**
ಪ್ರೊಜೆಕ್ಟ್ ಫೆಲೋ, ಎಂ.ಕಾಂ ವಿಭಾಗ
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ



ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ್ ಎಸ್. ಚಟಪಲ್ಲಿಯವರು ವಿಶ್ವವಿದ್ಯಾಲಯದಲ್ಲಿ ನಡೆದ “ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ” ವಿಷಯದ ಬಗ್ಗೆ ಎರಡು ದಿನಗಳ ಕಾರ್ಯಗಾರದಲ್ಲಿ ಮಾತನಾಡುತ್ತಿರುವುದು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ವಿಭಾವಾಣಿ, ಕರ್ನಾಟಕ ಚಾಪ್ಟರ್ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ ಮಾರ್ಚ್ 15 ಹಾಗೂ 16 2021 ರಂದು “ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ” ವಿಷಯದ ಬಗ್ಗೆ ಎರಡು ದಿನಗಳ ಕಾರ್ಯಾಗಾರವನ್ನು ನಡೆಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ವಹಿಸಿಕೊಂಡಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಶ್ರೀ ಸುಗುರಯ್ಯಸ್ವಾಮಿ, ರಾಜ್ಯಾಧ್ಯಕ್ಷರು, ವಿಭಾವಾಣಿ ಕರ್ನಾಟಕ ಚಾಪ್ಟರ ಹಾಗೂ ಮಾನ್ಯ ಶ್ರೀ ಭರತ್ ಎಸ್ ಭಾ.ಆ.ಸೇ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ ಇವರು ಭಾಗವಹಿಸಿ ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಕಾರ್ಯಾಗಾರದಲ್ಲಿ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಹಾಗೂ ತರಬೇತಿ ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರು ಉಪಸ್ಥಿತರಿದ್ದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಕೈಗೊಳ್ಳುವ ಕೆಲಸ ಕಾರ್ಯಗಳು ವಿಶಾಲವಾಗಿದ್ದು, ಇದರಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಹೆಚ್ಚಾಗಿದ್ದು, ಜನರಿಗೆ ಅನುಕೂಲವಾಗುವಂತಹ ಯೋಜನೆಗಳ ಅನುಷ್ಠಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಭಾಗಿತ್ವ ಅಪಾರವಾಗಿದೆ ಹಾಗೂ ಸರ್ಕಾರದ ಯೋಜನೆಗಳು ಸಾರ್ವಜನಿಕರಿಗೆ ಸರಿಯಾದ ರೀತಿಯಲ್ಲಿ ತಲುಪಬೇಕಾದರೆ ಈ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವು ಕೂಡಾ ಪ್ರಮುಖವಾಗಿದೆ ಎಂದು ಮಾನ್ಯ ಶ್ರೀ ಭರತ್ ಎಸ್. ಭಾ.ಆ.ಸೇ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗದಗ ಇವರು ತಮ್ಮ ಉದ್ಘಾಟಕರ ನುಡಿಯಲ್ಲಿ ತಿಳಿಸಿದರು.

ವಿಶ್ವವಿದ್ಯಾಲಯವು ಜ್ಞಾನವನ್ನು ಹೊರಹೊಮ್ಮಿಸುವ ಕೇಂದ್ರವಾಗಿದೆ. ಸುಭದ್ರವಾದ ರಾಷ್ಟ್ರ ನಿರ್ಮಾಣವಾಗಬೇಕಾದರೆ, ಸರಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಒಟ್ಟುಗೂಡಿ ನಗರ ಪ್ರದೇಶಗಳ ಅಭಿವೃದ್ಧಿ ಮಾತ್ರವಲ್ಲದೆ, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ವಿಷಯಗಳಿಗೆ ಪ್ರಾಮುಖ್ಯತೆಯನ್ನು ನೀಡಿದಾಗ ಗ್ರಾಮೀಣಾಭಿವೃದ್ಧಿಗೆ ಶಕ್ತಿ ತುಂಬಿದಂತಾಗುತ್ತದೆ ಎಂದು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಹೇಳಿದರು.



ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಪಕರಾದ
ಡಾ. ಎನ್. ಶಿವಣ್ಣ ಅವರು ಸಂಪನ್ಮೂಲ ವ್ಯಕ್ತಿಗಳಾಗಿ
ಭಾಗವಹಿಸಿ, ಮಾತನಾಡುತ್ತಿರುವುದು

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ 39 ಸ್ವಯಂ ಸೇವಾಸಂಸ್ಥೆಗಳ ಪ್ರತಿನಿಧಿಗಳು, ಎರಡು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ದಿನದ ಮೊದಲನೇ ಅಧಿವೇಶನದಲ್ಲಿ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಪಕರಾದ ಡಾ. ಎನ್. ಶಿವಣ್ಣ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಆಯಾಮಗಳ ಬಗ್ಗೆ ತಿಳಿಸಿದರು. ಎರಡನೇ ಅಧಿವೇಶನದಲ್ಲಿ ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಶಶಿಭೂಷಣ ದೇವೂರ ಇವರು ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಸಂಯೋಜನೆ ಕುರಿತು ಸಂಪನ್ಮೂಲ ವ್ಯಕ್ತಿಗಳಾಗಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಾರ್ಯಾಗಾರದ ಎರಡನೇ ದಿನದ ಮೂರನೇ ಅಧಿವೇಶನದಲ್ಲಿ ಡಾ. ಪ್ರಕಾಶ ಭಟ್, ನಿರ್ದೇಶಕರು, ಎಸ್.ಕೆ.ಡಿ.ಆರ್.ಡಿ.ಪಿ, ಧಾರವಾಡ ಹಾಗೂ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಪರಿಷತ್ ಸದಸ್ಯರು ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಪಂಚಾಯತ್ ರಾಜ್ ವ್ಯವಸ್ಥೆ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ ವಿಷಯದ ಕುರಿತು ತಮ್ಮ ಅನುಭವವನ್ನು ಹಂಚಿಕೊಂಡರು. ಕಾರ್ಯಾಗಾರದ ನಾಲ್ಕನೇ ಅಧಿವೇಶನದಲ್ಲಿ ಶ್ರೀ ಕಲ್ಲೇಶ ಬಿ., ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಗದಗ ಇವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಯೋಜನೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರದ ಕುರಿತು ಪ್ರಾತ್ಯಕ್ಷಿಕ ಸವಾಲುಗಳು ಹಾಗೂ ಸರ್ಕಾರದ ವಿವಿಧ ಯೋಜನೆಗಳನ್ನು ತಿಳಿಸುವುದರೊಂದಿಗೆ ಸ್ವಯಂ ಸೇವಾ ಸಂಸ್ಥೆಗಳು ಕ್ರಿಯಾಶೀಲರಾಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರಣೆ ಮಾಡಿದರು. ಕಾರ್ಯಾಗಾರದ ಐದನೇ ಅಧಿವೇಶನದಲ್ಲಿ ಕಾರ್ಯಕ್ರಮದ ಸಂಯೋಜಕರಾದ, ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಇವರು ಮಾತನಾಡಿ ವಿವಿಧ ಸಹಕಾರಿ ಸಂಸ್ಥೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಅವಕಾಶಗಳು ಎಂಬ ವಿಷಯದ ಬಗ್ಗೆ ತಿಳಿಸಿದರು. ಹೀಗೆ ವಿವಿಧ ವಿಷಯಗಳ ಕುರಿತು ಸ್ವಯಂ ಸೇವಾ ಸಂಸ್ಥೆಗಳಿಗೆ ತಿಳಿಸುವುದರೊಂದಿಗೆ ವಿಶ್ವವಿದ್ಯಾಲಯದ ಕ್ಷೇತ್ರಗಳಾದ ಸಬರಮತಿ ಆಶ್ರಮ, ಕೃಷಿ ಚಟುವಟಿಕೆಗಳ ವೀಕ್ಷಣೆ ಮತ್ತು ವಿಶ್ವವಿದ್ಯಾಲಯದ ಕಾರ್ಯನ್ಮೋಖ ಹಂತದಲ್ಲಿರುವ ವಿವಿಧ ಯೋಜನೆಗಳ ಬಗ್ಗೆ ವಿಶ್ವವಿದ್ಯಾಲಯದ ಸಿಬ್ಬಂದಿಗಳು ಪರಿಚಯಿಸಿದರು.



ವಿಶ್ವವಿದ್ಯಾಲಯದ ಆಡಳಿತ ವಿಭಾಗದ ಸಹಾಯಕ ನಿರ್ದೇಶಕರಾದ
ಶ್ರೀ ಶಶಿಭೂಷಣ ದೇವೂರ ಅವರು ಸಂಪನ್ಮೂಲ ವ್ಯಕ್ತಿಗಳಾಗಿ
ಭಾಗವಹಿಸಿ, ಮಾತನಾಡುತ್ತಿರುವುದು

ಎರಡನೇ ದಿನದ ಕೊನೆಯ ಅಧಿವೇಶನದಲ್ಲಿ ಚರ್ಚೆ ಹಾಗೂ ಸಂವಾದವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರು ವಿಭಾವಾಣಿ, ಕರ್ನಾಟಕ ಚಾಪ್ಟರ್ ಮಾನ್ಯಶ್ರೀ ಸುಗುರಯ್ಯಸ್ವಾಮಿ ಈ ಎರಡು ದಿನದ ಕಾರ್ಯಾಗಾರ ಯಶಸ್ವಿಯಾದ ಬಗ್ಗೆ ಸಂತಸ ಹಂಚಿಕೊಳ್ಳುತ್ತಾ

ಕಾರ್ಯಾಗಾರ ಆಯೋಜಿಸಲು ಅವಕಾಶ ಹಾಗೂ ಪ್ರೋತ್ಸಾಹ ನೀಡಿದ ಮಾನ್ಯ ಕುಲಪತಿಗಳಾದ ಪ್ರೊ ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಮತ್ತು ಕಾರ್ಯಾಗಾರವನ್ನು ಯಶಸ್ವಿಯಾಗಿ ಆಯೋಜಿಸಿದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾದ ಡಾ. ಅಬ್ದುಲ್ ಅಜೀಜ್ ಮುಲ್ಲಾ ಹಾಗೂ ಅವರ ತಂಡದ ಸದಸ್ಯರನ್ನೂ ಶ್ಲಾಘಿಸುವುದರೊಂದಿಗೆ ಧನ್ಯವಾದಗಳನ್ನು ತಿಳಿಸಿದರು.

ವಿವಿಧ ಜಿಲ್ಲೆಗಳಿಂದ ಕಾರ್ಯಾಗಾರದಲ್ಲಿ ಭಾಗವಹಿಸಿದ ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರು ಕಾರ್ಯಾಗಾರ ಕುರಿತು ತಮ್ಮ ಅನುಭವ ಹಾಗೂ ಅಭಿಪ್ರಾಯಗಳನ್ನು ತಿಳಿಸುವ ಮುಖಾಂತರ ಪಂಚಾಯತ್ ರಾಜ್ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ ಕುರಿತು ಸಾಕಷ್ಟು ವಿಷಯಗಳನ್ನು ತಿಳಿದುಕೊಂಡಿದ್ದೇವೆ ಎಂದು ತಿಳಿಸಿದರು. ಈ ತರಹದ ತರಬೇತಿ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಮುಖಾಂತರ ಪಡೆಯುವುದು ವಿಶೇಷವಾಗಿದೆ ಹಾಗೂ ಕಾರ್ಯಾಗಾರದಲ್ಲಿ ಆಯ್ಕೆ ಮಾಡಿದ ವಿಷಯಗಳು ಕೂಡಾ ಸ್ವಯಂ ಸೇವಾ ಸಂಸ್ಥೆಗಳ ಸೇವೆಯಲ್ಲಿ ಅಗತ್ಯವಿರುವ ವಿಷಯಗಳಾಗಿವೆ. ಈ ಕಾರ್ಯಾಗಾರದ ಅನುಭವವು ಮುಂದಿನ ದಿನದ ಕಾರ್ಯಕ್ಷೇತ್ರಗಳಲ್ಲಿ ಉತ್ತೇಜನ, ಪ್ರೇರಣೆ ಒದಗಿಸುವುದರೊಂದಿಗೆ ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದರಲ್ಲಿ ಸಹಾಯಕಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇಂತಹ ಹಲವಾರು ಕಾರ್ಯಕ್ರಮಗಳು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ, ಮೇಲ್ವಿಚಾರಣೆ ಕೇಂದ್ರದಿಂದ ನಡೆಸಬೇಕು ಎಂದು ಬಹುತೇಕರು ತಿಳಿಸಿದರು.

ಎಂ.ಕಾಂ. ವಿಭಾಗದ ಪ್ರೊಜೆಕ್ಟ್ ಫೆಲೋ ಹಾಗೂ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಂಯೋಜಕರಾದ ಶ್ರೀ ಗುರುದತ್ತ ರಾಯ್ಕರ ಅವರು ಎರಡು ದಿನಗಳ ಕಾರ್ಯಾಗಾರದ ಸಂಯೋಜನೆ ಮತ್ತು ನಿರೂಪಣೆಯ ಜವಾಬ್ದಾರಿಯನ್ನು ನಿರ್ವಹಿಸಿದರು.



ವಿಶ್ವವಿದ್ಯಾಲಯದಲ್ಲಿ ನಡೆದ "ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ" ವಿಷಯದ ಬಗ್ಗೆ ಎರಡು ದಿನಗಳ ಕಾರ್ಯಾಗಾರದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದು

ವಿಶೇಷ ಕಾರ್ಯಕ್ರಮ

# ವಿಶ್ವ ಜಲ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಉದ್ಘಾಟನಾ ಕಾರ್ಯಕ್ರಮ




**ಡಿ. ಎಚ್. ಅಬ್ದುಲ್ ಗನಿ**
ವಿದ್ಯಾರ್ಥಿ, ಸಾರ್ವಜನಿಕ ಆಡಳಿತ ವಿಭಾಗ
ಕ.ರಾ.ಗ್ರಾ. ಮತ್ತು ಪಂ.
ವಿಶ್ವವಿದ್ಯಾಲಯ, ಗದಗ




ವಿಶ್ವವಿದ್ಯಾಲಯದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸತೀಶ್ ಕುಮಾರ್ ಅವರು ವಿಶ್ವವಿದ್ಯಾಲಯದ ಕುಲಪತಿಗಳು ಮತ್ತು ಕುಲಸಚಿವರೊಂದಿಗೆ ಕೃಷಿ ಹೊಂಡ, ನೆರಳುಮನೆ ಹಾಗೂ ಹಸಿರು ಮನೆಯನ್ನು ಉದ್ಘಾಟಿಸುತ್ತಿರುವುದು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ವಿಶ್ವ ಜಲ ದಿನಾಚರಣೆಯ ಅಂಗವಾಗಿ ಜನರಲ್ಲಿ ನೀರಿನ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಮತ್ತು ಅದರ ಸದ್ಬಳಕೆ ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕು, ನೀರನ್ನು, ಪರಿಸರವನ್ನು ಮತ್ತು ಗಾಳಿಯನ್ನು ನಾವು ಜವಾಬ್ದಾರಿಯುತವಾಗಿ ಬಳಕೆ ಮಾಡಲಿಲ್ಲ ಎಂದರೆ ಮುಂದಿನ ಪೀಳಿಗೆ ಅನುಭವಿಸಬೇಕಾಗಿರುವ ಬಹಳಷ್ಟು ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಆದ್ದರಿಂದ ಈ ವರ್ಷ ವಿಶ್ವ ಜಲ ದಿನವು “ಮೌಲ್ಯಾಧಾರಿತ ಜಲ” ಎಂಬ ಧ್ಯೇಯ ವಾಕ್ಯ ನೀಡಿದೆ. ಇದರ ಪ್ರಯುಕ್ತ ವಿಶ್ವವಿದ್ಯಾಲಯದಲ್ಲಿ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರದಲ್ಲಿ ಕೃಷಿ ಹೊಂಡವನ್ನು ನಿರ್ಮಿಸಲಾಗಿದೆ. ಈ ಒಂದು ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಮಾನ್ಯ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ ಕುಲಸಚಿವರಾದ ಪ್ರೊ. ಬಸವರಾಜ್ ಎಲ್. ಲಕ್ಕಣ್ಣವರ ಮತ್ತು ಗದಗ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸತೀಶಕುಮಾರ ಎಂ. ಇವರು ಉಪಸ್ಥಿತರಿದ್ದರು ಮತ್ತು ಇದರ ಜೊತೆಗೆ ನೆರಳುಮನೆ ಹಾಗೂ ಪಾಲಿಹೌಸ (ಹಸಿರು ಮನೆ) ಉದ್ಘಾಟನೆಯನ್ನು ಸಹ ಮಾಡಲಾಯಿತು.

ಈ ವಿಶ್ವವಿದ್ಯಾಲಯವು ಗ್ರಾಮೀಣ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನಿಟ್ಟುಕೊಂಡು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ, ಗ್ರಾಮೀಣ

ಜನರಿಗೂ ಇದರ ಬಗ್ಗೆ ಅರಿವು ಮೂಡಿಸುವ ಕಾರ್ಯದತ್ತ ಹೆಜ್ಜೆ ಹಾಕಿದೆ. ಕೃಷಿ ಹೊಂಡ ನಿರ್ಮಿಸಿರುವ ಉದ್ದೇಶವೇನೆಂದರೆ ಗ್ರಾಮೀಣ ಮಟ್ಟದಲ್ಲಿ ಕೃಷಿ ಮಾಡಲು ರೈತರು ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವುದು ಸಾಮಾನ್ಯವಾಗಿದ್ದು, ಇಂತಹ ಸಮಸ್ಯೆಗಳಿಗೆ ಪರಿಹಾರ ಮಾರ್ಗವಾಗಿ ಕೃಷಿ ಹೊಂಡ ಅನುಕೂಲವಾಗಿದೆ.

**ಕೃಷಿ ಹೊಂಡದ ಮಾಹಿತಿ**

ಕರ್ನಾಟಕ ಸರ್ಕಾರದ ಕೃಷಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೃಷಿ ಭಾಗ್ಯ ಯೋಜನೆಯಲ್ಲಿ ಕೃಷಿ ಹೊಂಡ ನಿರ್ಮಾಣ ಮಾಡಲು ಸರ್ಕಾರ ಅನೇಕ ಸವಲತ್ತುಗಳನ್ನು ನೀಡಿದೆ. ಈ ಯೋಜನೆಯನ್ನು ಕರ್ನಾಟಕ ಸರ್ಕಾರವು 2014–15 ರಲ್ಲಿ ಜಾರಿಗೆ ತಂದಿದೆ. ಹೊಂಡದಿಂದ ನೀರನ್ನು ಮೇಲೆತ್ತಲು ಡಿಸೇಲ್, ಸೋಲಾರ ಪಂಪ್‌ಸೆಟ್ ವಿತರಣೆ, ನೀರನ್ನು ಬೆಳೆಗಳಿಗೆ ಹಾಯಿಸಲು ಲಘು ನೀರಾವರಿ (ಹನಿ/ತುಂತುರು) ಪದ್ದತಿ ಅಳವಡಿಕೆ, ಕೃಷಿ ಹೊಂಡದ ಸುತ್ತಲೂ ನೆರಳು ಪರದೆಯ ಅಳವಡಿಕೆ ಮಾಡಲು ಕರ್ನಾಟಕ ಸರ್ಕಾರವು ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಘಟಕ ವೆಚ್ಚದ ಶೇ. 90 ರಷ್ಟು ಮತ್ತು ಸಾಮಾನ್ಯ ವರ್ಗದ ಜನರಿಗೆ ಶೇ.80 ರಷ್ಟು ಸಹಾಯಧನ ಒದಗಿಸುತ್ತಿದೆ.

**ಕೃಷಿ ಹೊಂಡದ ಯೋಜನೆಯ ಅನುಷ್ಠಾನ**

- 2014 – 15ರಲ್ಲಿ ಮುಖ್ಯ ಒಣ ಭೂಮಿ ವಲಯಗಳ 23 ಜಿಲ್ಲೆಗಳ 107 ತಾಲ್ಲೂಕುಗಳಲ್ಲಿ ಜಾರಿಗೆ ತರಲಾಯಿತು.
- 2015 - 16 ನೇ ಸಾಲಿನಲ್ಲಿ 850 ಮೀಟರ್‌ಗಿಂತ ಕಡಿಮೆ ಮಳೆ ಬೀಳುವ ತಾಲ್ಲೂಕುಗಳನ್ನು ಸೇರ್ಪಡೆ ಮಾಡಿ ಒಟ್ಟು 25 ಜಿಲ್ಲೆಗಳ 131 ತಾಲ್ಲೂಕುಗಳಲ್ಲಿ ಜಾರಿಗೆ ತರಲಾಯಿತು.
- 2016 – 17 ನೇ ಸಾಲಿನಲ್ಲಿ 132 ತಾಲ್ಲೂಕಗಳಲ್ಲಿ ಜಾರಿಗೊಳಿಸಲಾಯಿತು.
- 2017 – 18 ನೇ ಸಾಲಿನಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳ ಎಲ್ಲಾ ತಾಲ್ಲೂಕುಗಳಿಗೆ ವಿಸ್ತರಿಸಲಾಯಿತು.

**ಕೃಷಿ ಹೊಂಡ ನಿರ್ಮಾಣ ಮಾಡುವ ಉದ್ದೇಶಗಳು**

- ರಾಜ್ಯದ ಮಳೆಯಾಶ್ರಿತ ಸಾಗುವಳಿ ಪ್ರದೇಶವನ್ನು ಸುಸ್ಥಿರ ಕೃಷಿಯನ್ನಾಗಿ ರೂಪಾಂತರಗೊಳಿಸುವುದು.
- ಸಮರ್ಪಕ ಮಳೆ ನೀರಿನ ಸಂಗ್ರಹಣೆ ಮತ್ತು ಉಪಯುಕ್ತ ಬಳಕೆ ಪದ್ಧತಿಯಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವುದು.
- ಕೃಷಿ ಹೊಂಡದಿಂದ ಸಂದಿಗ್ದ ಹಂತಗಳಲ್ಲಿ ರಕ್ಷಣಾತ್ಮಕ ನೀರಾವರಿ ಸೌಲಭ್ಯ ಒದಗಿಸುವುದು.
- ರೈತರ ಆದಾಯ ಹೆಚ್ಚಿಸುವುದು.
- ಎತ್ತರದ ಪ್ರದೇಶಗಳಲ್ಲಿ ನಿರ್ಮಾಣ ಮಾಡುವುದರಿಂದ ವಿದ್ಯುತ್ ಇಲ್ಲದೆ ನೀರಿನ ಬಳಕೆ ಮಾಡಬಹುದು.
- ಕೃಷಿ ಉನ್ನತೀಕರಣ ಮಾಡುವುದು.
- ಅಲ್ಪ ನೀರಿನಿಂದ ಮಹಾ ಬೆಳೆ ಬೆಳೆಯುವ ಉದ್ದೇಶ.
- ಕೃಷಿಯಲ್ಲಿನ ಆಧುನೀಕರಣ ಹಾಗೂ ಎತ್ತರ / ಬಂಜರು ಭೂಮಿಯ ಉಪಯೋಗ.

**ಕೃಷಿ ಹೊಂಡದಿಂದಾಗುವ ಲಾಭಗಳು**

- ಯಾವುದೇ ಸಮಯದಲ್ಲಿ ನೀರು ಸಂಗ್ರಹಣೆ ಮಾಡಬಹುದು.
- ಎತ್ತರದ ಪ್ರದೇಶಗಳಲ್ಲಿ ನಿರ್ಮಾಣ ಮಾಡುವುದರಿಂದ ವಿದ್ಯುತ್ ಅಥವಾ ಎಂಜಿನ್‌ಗಳು ಇಲ್ಲದೆ ನೀರಿನ ಬಳಕೆ ಮಾಡಬಹುದು.
- ನೀರಿನ ಮಿತವಾದ ಬಳಕೆ ಮತ್ತು ಕಡಿಮೆ ಪ್ರಮಾಣದ ನೀರಿನಲ್ಲಿ ಹೆಚ್ಚಿನ ಬೆಳೆಗಳನ್ನು ಬೆಳೆಯಲು ಅನುಕೂಲವಾಗುತ್ತದೆ.
- ಡ್ರಿಪ್ ಮತ್ತು ಸ್ಪ್ರಿಂಕ್ಲರಗಳಿಗೆ ನೀರು ಸರಿಯಾಗಿ ಪೂರೈಕೆ ಮಾಡಬಹುದಾಗಿದೆ.

ಅದೇ ರೀತಿ ಕೃಷಿ ಹೊಂಡ ಮಾತ್ರವಲ್ಲದೆ ಹಸಿರು ಮನೆ ಮತ್ತು ನೆರಳು ಮನೆಗಳನ್ನು, ನರ್ಸರಿ ವಿಭಾಗದಲ್ಲಿ ಸಸಿಗಳನ್ನು ಬೆಳೆಸಲು ಮತ್ತು ಅವುಗಳನ್ನು ಪೋಷಿಸಲು ಅನುಕೂಲವಾಗುವಂತೆ ಮಾಡಲಾಗಿದೆ.

ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯದಲ್ಲಿ ಕೇವಲ ಪುಸ್ತಕೀಯ ಜ್ಞಾನ ಮಾತ್ರವಲ್ಲದೆ ಎಲ್ಲಾ ರೀತಿಯ ನೈಜ ಜೀವನದಲ್ಲಿ ಬದುಕಲು ಬೇಕಾದ ಅವಶ್ಯಕತೆಗಳನ್ನು ಮತ್ತು ಕೃಷಿಯ ಬಗ್ಗೆ ಪ್ರಾಯೋಗಿಕವಾಗಿ ತರಬೇತಿ ಪಡೆಯಲು ಉತ್ತಮವಾದ ಸುವರ್ಣಾವಕಾಶವನ್ನು ಕಲ್ಪಿಸಿದೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯವನ್ನು ರೂಪಿಸುತ್ತಿರುವ ವಿಶ್ವವಿದ್ಯಾಲಯ ಮತ್ತು ವಿಶ್ವವಿದ್ಯಾಲಯದ ಕುಲಪತಿಗಳಿಗೆ ಸದಾ ಚಿರಋಣಿಯಾಗಿರುತ್ತೇನೆ.



ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಸ್ಥಾಪಿತವಾದ ಮಾದರಿ ಕೃಷಿ ಹೊಂಡ













# ವಿಶ್ವವಿದ್ಯಾಲಯದ ಚಟುವಟಿಕೆಗಳು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಹಾಗೂ ಹಣಕಾಸು ಅಧಿಕಾರಿಗಳಾದ ಶ್ರೀ. ಪ್ರಶಾಂತ ಜೆ. ಸಿ ಯವರ ನೇತೃತ್ವದಲ್ಲಿ ವಿಭಿನ್ನವಾಗಿ ಹಾಗೂ ತ್ವರಿತವಾಗಿ ಪ್ರಗತಿ ಹೊಂದುತ್ತಿದೆ. ಅದಕ್ಕೆ ಸಾಕ್ಷಿ ಎಂಬಂತೆ ವಿಶ್ವವಿದ್ಯಾಲಯದಲ್ಲಿ ವಿಶೇಷ ಹಾಗೂ ವಿಭಿನ್ನತೆಯಿಂದ ಕೂಡಿದ ಹತ್ತು ಹಲವಾರು ಚಟುವಟಿಕೆಗಳು ಹಾಗೂ ಕಾರ್ಯಕ್ರಮಗಳು ಜರುಗುತ್ತಿವೆ. ಅದರಲ್ಲಿ ಖಾದಿ ದಿವಸ, ದೇಸೀ ಯೋಜನೆ, ಸ್ಮೃತಿ ವನ, ಮಾದರಿ ಸಸ್ಯ ಪಾಲನಾ ಕೇಂದ್ರ, ಸಮಗ್ರ ಕೃಷಿ ಮತ್ತು ಪಶುಸಂಗೋಪನೆ, ಜೈವಿಕ ಉದ್ಯಾನವನ, ಸಬರಮತಿ ಆಶ್ರಮ, ನೈಪುಣ್ಯ ಕೇಂದ್ರ, ಆತ್ಮ ವಿಶ್ವಾಸ (ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೋಶ), ಸ್ವ ಉದ್ಯಮ ಅಭಿವೃದ್ಧಿ ಕೋಶ, ಯೋಗಕ್ಷೇಮ ಯೋಗಕೇಂದ್ರ, ಮನೋಚೇತನ ಆಪ್ತಸಮಾಲೋಚನ ಕೇಂದ್ರ ಹಾಗೂ ಸರಕಾರಿ ಶಾಲೆಗಳ ದತ್ತು ಸ್ವೀಕಾರ ಯೋಜನೆಗಳಂತಹ ಯೋಜನೆಗಳು ಅದಾಗಲೇ ಅನುಷ್ಠಾನಗೊಂಡ ಹಾಗೂ ಎಲ್ಲರಿಗೂ ತಿಳಿದಂತಹುಗಳಾಗಿವೆ. ಎಂದಿನಂತೆ ವಿಶ್ವವಿದ್ಯಾಲಯವು 2021 ರ ಜನವರಿಯಿಂದ ಮಾರ್ಚ್ ತಿಂಗಳಲ್ಲಿ ಕೂಡ ಹಲವಾರು ವಿಶಿಷ್ಟವಾದ ಯೋಜನೆ ಹಾಗೂ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು ಅದರಲ್ಲಿ ಪ್ರಮುಖವಾದವುಗಳ ವಿವರ ಮುಂದಿನ ಪುಟಗಳಲ್ಲಿದೆ..

## ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಹಿರಿಯ ಗಾಂಧಿವಾದಿಗಳಾದ ಶ್ರೀ ಯಮನಯ್ಯ ಬಸಲಿಂಗ್ಯಯ ಮಠದ ಅವರ ಭೇಟಿ

ವಿಶ್ವವಿದ್ಯಾಲಯದ ಸಬರಮತಿ ಆಶ್ರಮಕ್ಕೆ ಹಿರಿಯ ಗಾಂಧಿವಾದಿಗಳು ಮತ್ತು ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಯಮನಯ್ಯ ಬಸಲಿಂಗಯ್ಯ ಮಠದ ಅವರು ಹಾಗೂ ಸಮಾಜ ಸೇವಕರಾದ ಡಾ. ಪ್ರಹ್ಲಾದ್ ಬಸಪ್ಪ ಬೋವಿ ಅವರು ಭೇಟಿ ನೀಡಿದರು.





# ಕ.ರಾ.ಗ್ರಾ. ಮತ್ತು ಪಂ.ರಾ. ವಿ.ವಿ.ಯಲ್ಲಿ ವಿವೇಕ ಸತ್ಸಂಗ ಹಾಗೂ ಸಂಕ್ರಾಂತಿ ಸಡಗರ



ಯೋಗಕ್ಷೇಮ ಯೋಗ ಕೇಂದ್ರದ ಯೋಗ ಶಿಬಿರದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.



ಅತಿಥಿಗಳು ಪುಸ್ತಕ ಪ್ರದರ್ಶನಕ್ಕೆ ಚಾಲನೆ ನೀಡುತ್ತಿರುವುದು.

ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನದ ಅಂಗವಾಗಿ ಸಬರಮತಿ ಆಶ್ರಮದ ವತಿಯಿಂದ ವಿವೇಕ ಸತ್ಸಂಗ ಕಾರ್ಯಕ್ರಮ ಹಾಗೂ ಮನೋಚೇತನ ಆಪ್ತಸಮಾಲೋಚನಾ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸಲಾಯಿತು.

ಕರ್ನಾಟಕ ಪಂಚಾಯತ್ ಪರಿಷತ್‌ನ ಉಪಾಧ್ಯಕ್ಷರಾದ ಸನ್ಮಾನ್ಯ ಶ್ರೀ ಡಿ. ಆರ್. ಪಾಟೀಲ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಹಾಗೂ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿದ ವಿದ್ಯಾಭಾರತಿಯ ದಕ್ಷಿಣ ಮಧ್ಯ ಕ್ಷೇತ್ರದ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಜಗದೀಶ ಜಿ. ಆರ್. ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

### ವಿಶ್ವವಿದ್ಯಾಲಯದ ವತಿಯಿಂದ

## ನಾಗಾವಿಯಲ್ಲಿ ಎನ್.ಎಸ್.ಎಸ್. ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನಾ ಕೋಶ ಹಾಗೂ ದೈಹಿಕ ಶಿಕ್ಷಣ ಮತ್ತು ಕ್ರೀಡಾ ನಿರ್ದೇಶನಾಲಯದ ವತಿಯಿಂದ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ ಜಯಂತಿ ಅಂಗವಾಗಿ ಎನ್.ಎಸ್.ಎಸ್. ವಾರ್ಷಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ನಾಗಾವಿ ಗ್ರಾಮದಲ್ಲಿ ಜರುಗಿಸಲಾಯಿತು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೀ ಸುಧೀರಸಿಂಹ ರಾ. ಘೋರ್ಪಡೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು ಹಾಗೂ ಗದಗ ತಾಲ್ಲೂಕ ಪಂಚಾಯತಿಯ ಮಾಜಿ ಅಧ್ಯಕ್ಷರುಗಳಾದ ಶ್ರೀ ಬಿ. ಆರ್. ದೇವರಡ್ಡಿ ಹಾಗೂ ಶ್ರೀ ಬಿ. ಎಸ್. ಚಿಂಚಲಿ ಅವರು ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು. ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದ ಭಾಗವಾಗಿ ಸ್ವಚ್ಛತೆಯ ಕುರಿತು ನಾಗಾವಿ ಗ್ರಾಮದಲ್ಲಿ ಜಾಗೃತಿ ಜಾಥವನ್ನು ನಡೆಸಲಾಯಿತು.



ಮುಖ್ಯ ಅತಿಥಿಗಳಾದ ಶ್ರೀ ಸುಧೀರಸಿಂಹ ರಾ. ಘೋರ್ಪಡೆ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಿರುವುದು.



ಸ್ವಚ್ಛತೆಯ ಕುರಿತು ನಾಗಾವಿ ಗ್ರಾಮದಲ್ಲಿ ಜಾಗೃತಿ ಜಾಥವನ್ನು ನಡೆಸುತ್ತಿರುವುದು

## ಎಂ.ಎ. ಅರ್ಥಶಾಸ್ತ್ರ ವಿಭಾಗದಿಂದ ಕೇಂದ್ರ ಬಜೆಟ್ 2021–22 ನೇರ ಪ್ರಸಾರ ಮತ್ತು ಮುಖ್ಯಾಂಶಗಳ ಚರ್ಚೆ

ವಿಶ್ವವಿದ್ಯಾಲಯ, ಗದಗ ಎಂ.ಎ. ಅರ್ಥಶಾಸ್ತ್ರ ಕಾರ್ಯಕ್ರಮದ ವತಿಯಿಂದ ಎಂ.ಎ. ಅರ್ಥಶಾಸ್ತ್ರ, ಎಂ.ಎಸ್.ಡಬ್ಲ್ಯು ಹಾಗೂ ಎಂ.ಪಿ.ಎಚ್. ಕಾರ್ಯಕ್ರಮದ ವಿದ್ಯಾರ್ಥಿಗಳಿಗೆ ದಿನಾಂಕ 01–02–2021 ರಂದು 2021–22ರ ಕೇಂದ್ರ ಬಜೆಟ್‌ನ ನೇರಪ್ರಸಾರ ಮತ್ತು ಮುಖ್ಯಾಂಶಗಳ ಚರ್ಚೆ ಕಾರ್ಯಕ್ರಮವನ್ನು ಬೆಳಗ್ಗೆ 11 ಗಂಟೆಗೆ ಸಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು.





ಕೇಂದ್ರ ಬಜೆಟ್ 2021–22 ನೇರ ಪ್ರಸಾರದ ಭಾವಚಿತ್ರಗಳು

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಿಂದ ಗದಗ

# ಜಿಲ್ಲೆಯಲ್ಲಿ 'ದತ್ತು ಸ್ವೀಕರಿಸಿದ' ಸರಕಾರಿ ಶಾಲೆಗಳ ಅಭಿವೃದ್ಧಿ ಕುರಿತು ಸಭೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ಹಾಗೂ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ ಇವರ ಸಹಯೋಗದೊಂದಿಗೆ ದತ್ತು ಶಾಲೆಗಳ ಕುರಿತು ದಿನಾಂಕ: 21/01/2021 ರಂದು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಸಭೆ ಆಯೋಜಿಸಲಾಗಿತ್ತು.

ಸರಕಾರಿ ಶಾಲೆಗಳ ದತ್ತು ಸ್ವೀಕಾರ ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ, ಸ್ವಾಗತಿಸಿದರು, ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿಯವರು ಪ್ರಾಸ್ತಾವಿಕ ಮತ್ತು ಉದ್ದೇಶಗಳ ಕುರಿತು ಮಾತನಾಡಿದರು.





ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ್.
ಶ್ರೀ ಬಸಲಿಂಗಪ್ಪ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಗದಗ,
ಗದಗ ಜಿಲ್ಲೆಯ 20 ಸರಕಾರಿ ದತ್ತು ಶಾಲೆಯ ಮುಖ್ಯೋಪಾಧ್ಯಾಯರು,
ಹಾಗೂ ಸಂಚಾಲನ ಸಮಿತಿ ಸದಸ್ಯರು ಭಾಗವಹಿಸಿದ್ದರು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ

# 72ನೇ ಗಣರಾಜ್ಯೋತ್ಸವ ದಿನಾಚರಣೆ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ 72ನೇ ಗಣರಾಜ್ಯೋತ್ಸವ ಸಮಾರಂಭವನ್ನು ನೆರವೇರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೆ.ಎಸ್.ಎಸ್. ಶಿಕ್ಷಣ ಸಂಸ್ಥೆಯ ಆಧ್ಯಕ್ಷರು ಹಾಗೂ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಡಾ. ಬಿ. ಎಫ್. ದಂಡಿನ್ ಮತ್ತು ರಾಜ್ಯೋತ್ಸವ ಪ್ರಶಸ್ತಿ ವಿಜೇತರೂ ಹಾಗೂ ಕವಿಗಳೂ ಆದಂತಹ ಶ್ರೀ ರಾಮಣ್ಣ ದೊಡ್ಡಪ್ಪ ಬ್ಯಾಟಿ ರವರು ಆಗಮಿಸಿದ್ದರು. ಇವರನ್ನು ಎನ್.ಎಸ್.ಎಸ್. ವಿಭಾಗದ ಸ್ವಯಂ ಸೇವಕರು ಪಥಸಂಚಲನದ ಮೂಲಕ ಧ್ವಜಾರೋಹಣಕ್ಕೆ ಸ್ವಾಗತಿಸಿದರು. ನಂತರ ಅತಿಥಿ ಮಹೋದಯರಿಂದ ಧ್ವಜಾರೋಹಣ ನೆರವೇರಿಸಲಾಯಿತು.





# ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ಗಾಂಧೀಜಿಯವರ ಪುಣ್ಯಸ್ಮರಣೆ ಅಂಗವಾಗಿ "ಗಾಂಧಿ ಸ್ಮರಣೆ" ಕಾರ್ಯಕ್ರಮವನ್ನು ದಿನಾಂಕ 30-01-2021ರಂದು ಜರುಗಿಸಲಾಯಿತು.

ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ಮಹಾತ್ಮಾ ಗಾಂಧೀಜಿಯವರ 72 ನೇ ಪುಣ್ಯ ಸ್ಮರಣೆಯ ಅಂಗವಾಗಿ "ಗಾಂಧಿ ಸ್ಮರಣೆ" ಎಂಬ ಕಾರ್ಯಕ್ರಮವನ್ನು ಜರುಗಿಸಲಾಯಿತು. ಕಾರ್ಯಕ್ರಮವನ್ನು ಮೌನಾಚರಣೆ ಮತ್ತು ಗಾಂಧಿ ಭಜನೆಯೊಂದಿಗೆ ಪ್ರಾರಂಭಿಸಲಾಯಿತು. ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ್ದ ಗದುಗಿನ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎಸ್. ಯು. ಸಜ್ಜನಶೆಟ್ಟರ್ ರವರು ಕಾರ್ಯಕ್ರಮ ಉದ್ಘಾಟಿಸಿ



ಗದಗಿನ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಎಸ್. ಯು. ಸಜ್ಜನಶೆಟ್ಟರ್ ರವರು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡುತ್ತಿರುವುದು



ಬಸವಾ ಗ್ರೂಪ್ ಆಫ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಲರಾಮಸಾ ಎಸ್. ಬಸವಾ ಅವರು ಕೈಮಗ್ಗದ ಕುರಿತು ಮಾಹಿತಿಯನ್ನು ನೀಡುತ್ತಿರುವುದು.

ಮಾತನಾಡಿದರು. ಕಾರ್ಯಕ್ರಮದ ಇನ್ನೋರ್ವ ಅತಿಥಿಯಾದ ಬಸವಾ ಗ್ರೂಪ್ ಆಫ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಬಲರಾಮಸಾ ಎಸ್. ಬಸವಾ ಅವರು ಕೈಮಗ್ಗದ ಕುರಿತು ಮಾಹಿತಿಯನ್ನು ನೀಡಿ, ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳಿಗೆ ಖಾದಿ ಮತ್ತು ಹತ್ತಿಯಿಂದ ತಯಾರಿಸಿದ ಉಡುಪನ್ನು ಹೆಚ್ಚು ಧರಿಸಬೇಕು ಮತ್ತು ಪ್ರೋತ್ಸಾಹಿಸಬೇಕು ಎಂದು ಹೇಳಿದರು.



# ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಚರಕದಿಂದ ನೂಲು ತೆಗೆಯುವ ವಿಷಯ ಕುರಿತು ತರಬೇತಿ

ವಿಶ್ವವಿದ್ಯಾಲಯದ ಸಬರಮತಿ ಆಶ್ರಮದ ವತಿಯಿಂದ ವಿದ್ಯಾರ್ಥಿಗಳಿಗೆ ಚರಕದಿಂದ ನೂಲು ತೆಗೆಯುವ ವಿಷಯ ಕುರಿತು ತರಬೇತಿಯನ್ನು ನೀಡಲಾಯಿತು. ಈ ತರಬೇತಿ ಕಾರ್ಯಕ್ರಮಕ್ಕೆ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿರ್ದೇಶಕರಾದ ಶ್ರೀ ಎಸ್. ಎನ್. ತಾಂಬೆ ಅವರು ಮುಖ್ಯ ಅತಿಥಿಗಳಾಗಿ ಹಾಗೂ ಖಾನಾಪುರದ ಕೇಂದ್ರ ಗ್ರಾಮ ಕುಂಬಾರಿಕೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಮತ್ತು ಗದುಗಿನ ಮಾರುತಿ ಕೈಮಗ್ಗ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಮಂಜುನಾಥ ಕಿನ್ನಾಳ ಅವರು ಅತಿಥಿಗಳಾಗಿ ಭಾಗವಹಿಸಿದ್ದರು.



# ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸಂವಹನ ಕೌಶಲ್ಯ ಕಾರ್ಯಾಗಾರ

ದಿನಾಂಕ 5 ಮತ್ತು 6 ನೇ ಫೆಬ್ರವರಿ, 2021 ರಂದು ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಎರಡು ದಿನದ ಸಂವಹನ ಕೌಶಲ್ಯ ವಿಷಯದ ಕುರಿತಾಗಿ ವಿಶೇಷ ಕಾರ್ಯಾಗಾರವನ್ನು ವಿಶ್ವವಿದ್ಯಾಲಯದ ನೂತನ ಕಟ್ಟಡದ ಡೈನಿಂಗ್ ಹಾಲ್‌ನಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪ್ರೊ. ಬಸವರಾಜ್ ಡೊನೂರ (ಕುಲಸಚಿವರು, ಕೇಂದ್ರೀಯ ವಿಶ್ವವಿದ್ಯಾಲಯ, ಕರ್ನಾಟಕ, ಮಾಜಿ ಮುಖ್ಯ ಕಾರ್ಯನಿರ್ವಾಹಕರು, ಐ.ಜಿ.ಟಿ.ಯು. ದೇನಾ ಸ್ಕೂಲ್ ಆಫ್ ಹ್ಯೂಮಾನಿಟೀಸ್ ಆ್ಯಂಡ್ ಲಾಂಗ್ವೇಜಸ್, ಇಂಗ್ಲೀಷ್ ವಿಭಾಗದ ಮುಖ್ಯಸ್ಥರು, ಸಿ.ಯು.ಕೆ) ಇವರು ಆಗಮಿಸಿದ್ದರು. ಇವರು ಕಾರ್ಯಕ್ರಮವನ್ನು ಉದ್ಘಾಟಿಸುವ ಮೂಲಕ "ದ ಇಂಪಾರ್ಟೆನ್ಸ್ ಆಫ್ ಎಫೆಕ್ಟೀವ್ ಕಮ್ಯೂನಿಕೇಷನ್ ಮತ್ತು ಇಂಟರ್‌ಪರ್ಸನಲ್ ರಿಲೇಷನ್ ಶಿಪ್ಸ್" ಎಂಬ ವಿಷಯದ ಬಗ್ಗೆ ತಿಳಿಸಿದರು.







ವಿಶ್ವವಿದ್ಯಾಲಯದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸಂವಹನ ಕೌಶಲ್ಯ ಕಾರ್ಯಾಗಾರದಲ್ಲಿ ಪ್ರೊ. ಬಸವರಾಜ್ ಡೊನೂರ, ಕುಲಸಚಿವರು, ಕೇಂದ್ರೀಯ ವಿಶ್ವವಿದ್ಯಾಲಯ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡುತ್ತಿರುವುದು

### ವಿಶ್ವವಿದ್ಯಾಲಯದಿಂದ ಆಯೋಜಿಸಲಾದ

## ರೈತರ ಆದಾಯ ದ್ವಿಗುಣ ಸಂವಾದ ಕಾರ್ಯಕ್ರಮ : ಡಾ. ಅಶೋಕ ದಳವಾಯಿ ಹೇಳಿಕೆ

ವಿಶ್ವವಿದ್ಯಾಲಯದಿಂದ ರೈತರ ಆದಾಯ ದ್ವಿಗುಣ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಕೇಂದ್ರ ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಮಳೆ ಆಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ. ಅಶೋಕ ದಳವಾಯಿಯವರು ಭಾಗವಹಿಸಿ ಸ್ಥಳೀಯ ಹಾಗೂ ವಿದೇಶಿ ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ಬೆಳೆಗಳನ್ನು ಬೆಳೆದು ಸಂಸ್ಕರಿಸಿ ಪೂರೈಕೆ ಮಾಡುವ ವ್ಯವಸ್ಥೆ ಜಾರಿ ಮಾಡುವ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಬಹುದು ಎಂದು ಹೇಳಿದರು.





ವಿಶ್ವವಿದ್ಯಾಲಯದಿಂದ ಆಯೋಜಿಸಲಾದ ರೈತರ ಆದಾಯ ದ್ವಿಗುಣ ಸಂವಾದ ಕಾರ್ಯಕ್ರಮಕ್ಕೆ
ಕೇಂದ್ರ ಕೃಷಿ ಮತ್ತು ರೈತರ ಅಭಿವೃದ್ಧಿ ಸಚಿವಾಲಯದ ರಾಷ್ಟ್ರೀಯ ಮಳೆ ಆಶ್ರಿತ ಪ್ರದೇಶ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
ಡಾ. ಅಶೋಕ ದಳವಾಯಿಯವರು ಮಾತನಾಡುತ್ತಿರುವುದು.

### ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ

## ದತ್ತು ಶಾಲೆಗಳ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಪ್ರಾರಂಭೋತ್ಸವ

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ ದತ್ತು ಶಾಲೆಗಳ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಪ್ರಾರಂಭೋತ್ಸವವನ್ನು ಕೆ. ಎಚ್. ಪಾಟೀಲ ಸರಕಾರಿ ಬಾಲಕಿಯರ ಪ್ರೌಢ ಶಾಲೆ, ಹುಲಕೋಟಿಯಲ್ಲಿ ದಿನಾಂಕ 11 ಫೆಬ್ರುವರಿ 2021, ಮುಂಜಾನೆ 11:00 ಗಂಟೆಗೆ ಶಾಲೆಯ ಸಭಾಂಗಣದಲ್ಲಿ ಕಾರ್ಯಕ್ರಮ ಆಚರಿಸಲಾಯಿತು. ಅದೇ ರೀತಿಯಾಗಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಗಂಡು ಮಕ್ಕಳ ಶಾಲೆ ಕುರ್ತಕೋಟಿಯಲ್ಲಿ ದಿನಾಂಕ 11 ಫೆಬ್ರುವರಿ 2021, ಮಧ್ಯಾಹ್ನ 12:00 ಗಂಟೆಗೆ ಶಾಲೆಯ ಸಭಾಂಗಣದಲ್ಲಿ ಕಾರ್ಯಕ್ರಮ ಆಚರಿಸಲಾಯಿತು.



ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್ ಚಟಪಲ್ಲಿ,
ಕುಲಸಚಿವರಾದ ಪ್ರೊ.ಬಸವರಾಜ ಎಲ್. ಲಕ್ಕಣ್ಣವರ್ ಹಾಗೂ ಹುಲಕೋಟಿ ಶಾಲೆಯ ಮುಖ್ಯೋಪಾಧ್ಯಾಯರು ಭಾಗವಹಿಸಿರುವುದು.



# ಸಬರಮತಿ ಆಶ್ರಮದಲ್ಲಿ ಶಿವರಾತ್ರಿಯ ಪ್ರಯುಕ್ತ

## "ಶಿವ ಸತ್ಸಂಗ" ಕಾರ್ಯಕ್ರಮವನ್ನು ಜರುಗಿಸಲಾಯಿತು.

ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಶಿವಪೂಜೆ ಮತ್ತು ಶಿವನಾಮ ಸ್ಮರಣೆಯೊಂದಿಗೆ ಶಿವ ಸತ್ಸಂಗಕ್ಕೆ ಚಾಲನೆಯನ್ನು ನೀಡಲಾಯಿತು. ನಂತರ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಶ್ರೇಷ್ಠ ಚಿಂತಕರು ಹಾಗೂ ಬರಹಗಾರರು ಆದ ಶ್ರೀಯುತ ದತ್ತಾತ್ರೇಯ ಹೊಸಬಾಳೆ ಅವರು ರಾಷ್ಟ್ರೀಯತೆ, ಅಧ್ಯಾತ್ಮಿಕತೆ ಹಾಗೂ ಗಾಂಧೀಜಿಯವರ ವಿಚಾರಗಳ ಕುರಿತು ಮಾತನಾಡಿದರು. ಕಾರ್ಯಕ್ರಮದ ಭಾಗವಾಗಿ ಏರ್ಪಡಿಸಿದ್ದ ಸಂಗೀತ ಕಛೇರಿಯಲ್ಲಿ ಗದುಗಿನ ಸಂಗೀತಗಾರರಾದ ಶ್ರೀ. ಜಿ. ಜಿ. ಸುತಾರಾ ಹಾಗೂ ಕಲಾ ತಂಡದವರು ಶಿವಭಕ್ತಿ ಕುರಿತಾದ ಗೀತೆಗಳನ್ನು ಪ್ರಸ್ತುತ ಪಡಿಸಿದರು.











ವಿಶ್ವವಿದ್ಯಾಲಯದ ಸಬರಮತಿ ಆಶ್ರಮದಲ್ಲಿ
ಮಹಾಶಿವರಾತ್ರಿಯ ಅಂಗವಾಗಿ ಶಿವಪೂಜೆ ಮತ್ತು ಶಿವನಾಮ ಸ್ಮರಣೆಯೊಂದಿಗೆ
ಶಿವ ಸತ್ಸಂಗಕ್ಕೆ ಚಾಲನೆಯನ್ನು ನೀಡುತ್ತಿರುವುದು

# ಕೊರೋನಾ ಲಸಿಕೆಯ ಮೊದಲ ಡೋಸ್

ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ ಪತ್ನಿ ಶ್ರೀಮತಿ ವಂದಿತಾ ವಿ. ಚಟಪಲ್ಲಿ ರವರು 12-03-2021 ರಂದು ಗದಗ ಜಿಲ್ಲೆಯ ಜಿಲ್ಲಾಸ್ಪತ್ರೆಯಲ್ಲಿ ಕೊರೋನಾ ಲಸಿಕೆಯ ಮೊದಲ ಡೋಸ್ ಅನ್ನು ಪಡೆದುಕೊಂಡರು. ಈ ಮೂಲಕ ಎಲ್ಲ ಅರ್ಹ ನಾಗರಿಕರಿಗೆ ಯಾವುದೇ ಸಂಶಯ ಹಾಗೂ ಭಯವಿಲ್ಲದೇ ಲಸಿಕೆ ಪಡೆದುಕೊಂಡು ದೇಶದಿಂದ ಮಹಾಮಾರಿ ಕೊರೋನಾವನ್ನು ತೊಲಗಿಸಲು ಕೈಜೋಡಿಸಬೇಕೆಂಬ ಸಂದೇಶವನ್ನು ರವಾನಿಸುವುದರ ಜೊತೆಗೆ ಇನ್ನೂ ಲಸಿಕೆ ಪಡೆದುಕೊಳ್ಳದಿದ್ದವರಿಗೆ ಲಸಿಕೆಯನ್ನು ಪಡೆಯಲು ಸ್ಫೂರ್ತಿಯಾದರು.





ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಹಾಗೂ
ಪತ್ನಿ ಶ್ರೀಮತಿ. ವಂದಿತಾ ವಿ. ಚಟಪಲ್ಲಿ ರವರು ಕರೋನ ಲಸಿಕೆಯನ್ನು ಪಡೆಯುತ್ತಿರುವುದು

# ವಿಶ್ವವಿದ್ಯಾಲಯದ ಎನ್.ಎಸ್.ಎಸ್ ಕೋಶದ ವತಿಯಿಂದ ಸ್ವಚ್ಛತಾ ಶಿಬಿರ





ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ಸ್ವಚ್ಛತಾ ಶಿಬಿರ ಕಾರ್ಯಕ್ರಮಕ್ಕೆ
ಕೇಂದ್ರ ಯುವಜನ ಅಧಿಕಾರಿಗಳಾದ ಶ್ರೀ ವಾಯ್. ಎಂ. ಉಪ್ಪಿನ್ ಅವರು ಚಾಲೆನ ನೀಡುತ್ತಿರುವುದು.

ವಿಶ್ವವಿದ್ಯಾಲಯದ ಎನ್.ಎಸ್.ಎಸ್. ಕೋಶದ ವತಿಯಿಂದ ನಗರದ ಬಸವೇಶ್ವರ ಪ್ರತಿಮೆಯ ಹೊರ ಆವರಣದಲ್ಲಿ ಸ್ವಚ್ಛತಾ ಶಿಬಿರ ಕಾರ್ಯಕ್ರಮವನ್ನು ಜರುಗಿಸಲಾಯಿತು. ಕಾರ್ಯಕ್ರಮದಲ್ಲಿ ಕೇಂದ್ರ ಯುವಜನ ಅಧಿಕಾರಿಗಳಾದ ಶ್ರೀ ವಾಯ್. ಎಂ. ಉಪ್ಪಿನ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸ್ವಚ್ಛತಾ ಶಿಬಿರಕ್ಕೆ ಚಾಲನೆ ನೀಡಿದರು.

### ವಿಶ್ವವಿದ್ಯಾಲಯ ಹಾಗೂ ವಿಭಾವಾಣಿ, ಕರ್ನಾಟಕ ಚಾಪ್ಟರ್ ಇವರ ಸಂಯುಕ್ತಾಶ್ರಯದಲ್ಲಿ

## ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರಿಗೆ
## "ಪಂಚಾಯತ್ ರಾಜ್ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ"

ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ ಹಾಗೂ ವಿಭಾವಾಣಿ, ಕರ್ನಾಟಕ ಚಾಪ್ಟರ್ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 15, 16 ಮಾರ್ಚ್ 2021 ರಂದು ನಡೆದ "ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ" ಬಗ್ಗೆ ಎರಡು ದಿನಗಳ ಕಾರ್ಯಾಗಾರದ ಉದ್ಘಾಟನಾ ಸಮಾರಂಭವನ್ನು ಮಾನ್ಯ ಶ್ರೀ ಭರತ್ ಎಸ್. ಭಾ.ಆ.ಸೇ., ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಉದ್ಘಾಟಿಸಿದರು.





ವಿಶ್ವವಿದ್ಯಾಲಯದಲ್ಲಿ "ಪಂಚಾಯತ್ ರಾಜ್ ವ್ಯವಸ್ಥೆಯ ಬಲವರ್ಧನೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರ ಮತ್ತು ಜವಾಬ್ದಾರಿ"
ಬಗ್ಗೆ ಎರಡು ದಿನಗಳ ಕಾರ್ಯಾಗಾರ ಸಮಾರಂಭವನ್ನು ಮಾನ್ಯ ಶ್ರೀ ಭರತ್ ಎಸ್. ಭಾ.ಆ.ಸೇ.,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಉದ್ಘಾಟಿಸುತ್ತಿರುವುದು

# ವಿಶ್ವವಿದ್ಯಾಲಯದಲ್ಲಿ ಕೃಷಿ ಹೊಂಡ, ನೆರಳುಮನೆ ಹಾಗೂ ಹಸಿರು ಮನೆಯ ಉದ್ಘಾಟನಾ ಸಮಾರಂಭ

ವಿಶ್ವವಿದ್ಯಾಲಯದ ಭೂ ಮಾಹಿತಿ ತಂತ್ರಜ್ಞಾನ ವಿಭಾಗದ ವತಿಯಿಂದ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ವಿಶ್ವ ಜಲ ದಿನದ ಪ್ರಯುಕ್ತ ಕೃಷಿ ಹೊಂಡ, ನೆರಳುಮನೆ ಹಾಗು ಹಸಿರು ಮನೆಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗದಗ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸತೀಶ ಕುಮಾರ ಎಂ. ಹಾಗೂ ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಸುರೇಶ ವಿ. ಕುಂಬಾರ ಅವರು ವಿಶ್ವವಿದ್ಯಾಲಯದ ಮಾದರಿ ಸಸ್ಯ ಶಿಶುಪಾಲನಾ ಕೇಂದ್ರದಲ್ಲಿ (ನರ್ಸರಿ) ನಿರ್ಮಾಣವಾದ ಕೃಷಿ ಹೊಂಡ, ನೆರಳುಮನೆ ಹಾಗೂ ಹಸಿರು ಮನೆಯನ್ನು ಉದ್ಘಾಟಿಸಿ ಮಾತನಾಡಿದರು.



ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸತೀಶ ಕುಮಾರ ಎಂ. ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡುತ್ತಿರುವುದು.




ಗಣ್ಯರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸುತ್ತಿರುವುದು.

# ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಆಮಂತ್ರಣ ಪತ್ರಿಕೆಯ ಬಿಡುಗಡೆ

ಏಪ್ರಿಲ್ 10, 2021 ರಂದು ನಡೆಯಲಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವದ ಆಮಂತ್ರಣ ಪತ್ರಿಕೆಯನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ಅವರು ಹಾಗೂ ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ ಅವರು ಬಿಡುಗಡೆಗೊಳಿಸಿದರು.

ಆಮಂತ್ರಣ ಪತ್ರಿಕೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಮಾನ್ಯ ಕುಲಪತಿಗಳು ಘಟಿಕೋತ್ಸವವು ವಿದ್ಯಾರ್ಥಿಗಳ ದೀಕ್ಷಾಂತ ಸಮಾರಂಭವಾಗಿದ್ದು, ವಿದ್ಯಾರ್ಥಿಗಳ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ವಿಶ್ವವಿದ್ಯಾಲಯದ ಈ ಪ್ರಥಮ ಘಟಿಕೋತ್ಸವವನ್ನು ವಿಶಿಷ್ಟವಾದ ರೀತಿಯಲ್ಲಿ ಆಯೋಜಿಸುವ ನಿಟ್ಟಿನಲ್ಲಿ ಸಕಲ ಸಿದ್ಧತೆಗಳು ಜರುಗುತ್ತಿವೆ ಎಂದು ತಿಳಿಸಿದರು.




## ಮುಂಬರುವ ವಿಶ್ವವಿದ್ಯಾಲಯದ ಕಾರ್ಯಕ್ರಮ

# ಪ್ರಥಮ ಘಟಿಕೋತ್ಸವ – ಗ್ರಾಮೀಣ ಪರಿವರ್ತನೆಯೆಡೆಗೆ ಒಂದು ಹೆಜ್ಜೆ

ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವವನ್ನು ದಿನಾಂಕ 10.04.2021 ರಂದು ನಾಗಾವಿ ಗ್ರಾಮದ ಹತ್ತಿರವಿರುವ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿರುವ ಸಭಾ ಭವನದಲ್ಲಿ ಹಮ್ಮಿಕೊಳ್ಳಲಾಗುವುದು. ಪ್ರಸ್ತುತ ಘಟಿಕೋತ್ಸವದಲ್ಲಿ ಒಟ್ಟು 7 ಸ್ನಾತಕೋತ್ತರ ಪದವಿ ಕಾರ್ಯಕ್ರಮಗಳ ಸುಮಾರು 250 ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಕಾರ್ಯಕ್ರಮವು ಜರುಗುವುದು. ಅದರಲ್ಲಿ ವಿವಿಧ ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಪಡೆಯುವುದರ ಮೂಲಕ ಸಾಧನೆಗೈದ 12 ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ ನೀಡಲಾಗುವುದು. 12 ಜನರಿಗೆ ದ್ವಿತೀಯ ರ್‍ಯಾಂಕ್ ಮತ್ತು 12 ಜನರಿಗೆ ತೃತೀಯ ರ್‍ಯಾಂಕ್ ಪ್ರಶಸ್ತಿ ಪತ್ರವನ್ನು ನೀಡಲಾಗುವುದು. ಘಟಿಕೋತ್ಸವಕ್ಕೆ ವಿಶ್ವವಿದ್ಯಾಲಯದ ಸಹ ಕುಲಾಧಿಪತಿಗಳು ಹಾಗೂ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಸನ್ಮಾನ್ಯ ಶ್ರೀ ಕೆ. ಎಸ್. ಈಶ್ವರಪ್ಪ ನವರು ಆಗಮಿಸಲಿದ್ದಾರೆ. ಘಟಿಕೋತ್ಸವ ಭಾಷಣವನ್ನು ಪ್ರಖ್ಯಾತ ಅಭಿವೃದ್ಧಿ ವಿದ್ವಾಂಸ, ಲೇಖಕ, ಸಾರ್ವಜನಿಕ ನೀತಿ ಶಾಸ್ತ್ರಜ್ಞ, ನಾಯಕತ್ವ ತರಬೇತುದಾರ ಡಾ.ಬಾಲಸುಬ್ರಮಣ್ಯ, ಸಂಸ್ಥಾಪಕರು ವಿವೇಕಾನಂದ ಯೂಥ್ ಮೂವ್‌ಮೆಂಟ್ ಹಾಗೂ ಸಂಸ್ಥಾಪಕರು ಮತ್ತು ಅಧ್ಯಕ್ಷರು ಗ್ರಾಮ್, ಮೈಸೂರು ಇವರು ನೆರವೇರಿಸುವರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆಗೈದ ಮಹನೀಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ, ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ್, ವಿತ್ತಾಧಿಕಾರಿಗಳಾದ ಶ್ರೀ. ಪ್ರಶಾಂತ ಜೆ. ಸಿ., ಕಾರ್ಯನಿವಾಹಕ ಪರಿಷತ್ತಿನ ಸದಸ್ಯರು ಹಾಗೂ ಶೈಕ್ಷಣಿಕ ಪರಿಷತ್‌ನ ಸದಸ್ಯರು ಉಪಸ್ಥಿತರಿರುವರು ಎಂದು ಕುಲಸಚಿವರಾದ ಪ್ರೊ. ಬಸವರಾಜ ಎಲ್. ಲಕ್ಕಣ್ಣವರ್ ರವರು ತಿಳಿಸಿರುತ್ತಾರೆ.

## ವಿಶ್ವವಿದ್ಯಾಲಯದ ತರಬೇತಿ, ಪ್ರಕಟಣೆ ಹಾಗೂ ಮೇಲ್ವಿಚಾರಣೆ ಕೇಂದ್ರ



ಭಾರತದ ಭವಿಷ್ಯವು ಹಳ್ಳಿಗಳಲ್ಲಿ ಅಡಗಿದೆ
- ಮಹಾತ್ಮಾ ಗಾಂಧೀ




**ವಿಶ್ವವಿದ್ಯಾಲಯದ ಕಛೇರಿ**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ–582101, ಕರ್ನಾಟಕ, ಭಾರತ
(ಪ್ರಾದೇಶಿಕ ಕಛೇರಿ : ಗ್ರಾಮೀಣಾಭಿವೃದ್ಧಿ ಭವನ, ನೆಲಮಹಡಿ, ಆನಂದರಾವ್ ವೃತ್ತ, ಬೆಂಗಳೂರು)
ಫೋ : (08372) 297214 ವೆಬ್‌ಸೈಟ್ : www.ksrdpru.ac.in